ಬೆಂಗಳೂರು ಸಂಪುಟ: 16 ಸಂಚಿಕೆ: 51 ಪುಟ: 06 ಗುರುವಾರ 16-01-2025 ₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)  Executive Editor: L P Babu  Honourary Editor: Venkatesh



ಸ್ವಯಂಕೃತ ಅಪರಾಧ

ನಟಿ ಕಲ್ಪನಾ ಮೇಲಿದ್ದ ಎರಡು ಆರೋಪಗಳಲ್ಲಿ ಒಂದು ಸತ್ಯ

ನಟ ಮಹೇಶ್ ಬಾಬುಗೆ ಚಿತ್ರಹಿಂಸೆ ಪುಟ 6

# ಕೆಪಿಸಿಸಿ ಹುದ್ದೆ ಮಾರಾಟಕ್ಕಿಲ್ಲ

## ಅಂಗಡಿಲೂ ಸಿಗಲ್ಲ, ಮಾಧ್ಯಮದವರು ಕೊಡ್ಸಲ್ಲ: ಶಿವಕುಮಾರ್ ಆಕ್ರೋಶ

**ಬೆಂಗಳೂರು:** "ಕೆಪಿಸಿಸಿ ಹುದ್ದೆ ಅಂಗಡಿಯಲ್ಲೂ ಸಿಗುವುದಿಲ್ಲ, ಮಾಧ್ಯಮಗಳ ಮುಂದೆ ಮಾತನಾಡಿದರೂ ಸಿಗುವುದಿಲ್ಲ" ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ಅವರು ಖಾರವಾಗಿ ಪ್ರತಿಕ್ರಿಯಿಸಿದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಗುರುವಾರ ಉತ್ತರಿಸಿದರು.

ಕೆಪಿಸಿಸಿ ಅಧ್ಯಕ್ಷ ಹುದ್ದೆ ಬದಲಾವಣೆ ಚರ್ಚೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, "ನಾವು ಮಾಡುವ ಕೆಲಸ, ಶ್ರಮವನ್ನು ಪಕ್ಷದ ನಾಯಕರು ಗುರುತಿಸಿ ಅದಕ್ಕೆ ಸೂಕ್ತವಾಗಿ ಹುದ್ದೆ ನೀಡುತ್ತಾರೆ. ಮಾಧ್ಯಮಗಳ ಮುಖಾಂತರ ಯಾರಾದರೂ ಹುದ್ದೆ ಕೇಳುತ್ತಾರೆಯೇ? ಇದನ್ನೆಲ್ಲಾ ಹೊಸದಾಗಿ ಕೇಳುತ್ತಿರುವೆ" ಎಂದರು.

"ಪಕ್ಷದ ವಿಚಾರದ ವಿಚಾರವಾಗಿ ಯಾವುದೇ ಬೆಳವಣಿಗೆ ಇದ್ದರೂ ನಾನೇ ಮಾಧ್ಯಮಗೋಷ್ಠಿ ಕರೆದು ಮಾಹಿತಿ ನೀಡುತ್ತೇನೆ. ಈಗ ನಮ್ಮ ಪಕ್ಷ ಸಂಘಟನೆ ಮಾಡಿ, ಪಕ್ಷ ಉಳಿಸಿ, ಬೆಳೆಸುವ ಕೆಲಸ ಮಾಡಬೇಕು. ಪಕ್ಷದಲ್ಲಿ ಎಲ್ಲರೂ ಶಿಸ್ತು ಕಾಪಾಡಬೇಕು ಎಂದು ನಮ್ಮ ಮುಖ್ಯಮಂತ್ರಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು ಬುದ್ಧಿವಾದ ಹೇಳಿದ್ದಾರೆ. ಯಾವುದೇ ವಿಚಾರವಾಗಿ ಬಹಿರಂಗವಾಗಿ ಚರ್ಚೆ ಮಾಡದಂತೆ ಸೂಚಿಸಿದ್ದಾರೆ" ಎಂದು ತಿಳಿಸಿದರು.



**ಮಾಧ್ಯಮಗಳ ಮುಂದೆ ಹೇಳಿಕೆಯಿಂದ ಪ್ರಯೋಜನವಿಲ್ಲ:** "ಪಕ್ಷದ ವಿಚಾರ ಮಾಧ್ಯಮಗಳ ಮುಂದೆ ಮಾತನಾಡುವಂತಹದಲ್ಲ. ಏನೇ ಇದ್ದರೂ ಎಐಸಿಸಿ ಅಧ್ಯಕ್ಷರು, ರಾಹುಲ್ ಗಾಂಧಿ, ಮುಖ್ಯಮಂತ್ರಿ ಅಥವಾ ನನ್ನ ಬಳಿ ಬಂದು ಮಾತನಾಡಲಿ. ಇದು ಕೇವಲ ಕಾಂಗ್ರೆಸ್ ಮಾತ್ರವಲ್ಲ. ಬಿಜೆಪಿ, ಜೆಡಿಎಸ್, ರೈತ ಸಂಘ ಸೇರಿದಂತೆ ಯಾವುದೇ ಪಕ್ಷವಾದರೂ ಪಕ್ಷದ ವಿಚಾರವನ್ನು ಆಂತರಿಕವಾಗಿ ಚರ್ಚೆ ಮಾಡಬೇಕು ಎಂದು ಹೇಳುತ್ತೇನೆ.

ನಾನು ಯಾವುದಾದರೂ ಹುದ್ದೆ ಬಯಸಿದರೆ ನೀವು (ಮಾಧ್ಯಮಗಳು) ಆ ಸ್ಥಾನ ನನಗೆ ಕೊಡಿಸುತ್ತೀರಾ? ಅಥವಾ ಈ ಹುದ್ದೆಗಳು ಅಂಗಡಿಯಲ್ಲಿ ಸಿಗುತ್ತದೆಯೇ? ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದರೆ ಯಾವುದೇ ಪ್ರಯೋಜನವಿಲ್ಲ. ಬದಲಿಗೆ ಇದರಿಂದ ವ್ಯತಿರಿಕ್ತ ಪರಿಣಾಮ ಬೀರುತ್ತದೆ" ಎಂದು ಕೇಳಿದರು.

**ಯಾರೇ ಇರಲಿ, ಹೋಗಲಿ ಪಕ್ಷ ಇರುತ್ತದೆ:** "ಈ ಪಕ್ಷವನ್ನು ಕೇವಲ ಡಿ.ಕೆ. ಶಿವಕುಮಾರ್ ಒಬ್ಬನೇ ಅಧಿಕಾರಕ್ಕೆ ತಂದಿಲ್ಲ. ಕಾರ್ಯಕರ್ತರು, ಮತದಾರರು ನಮ್ಮ ಮೇಲೆ ಅಪಾರವಾದ ವಿಶ್ವಾಸ ಇಟ್ಟು ನಮಗೆ ಅಧಿಕಾರ ನೀಡಿದ್ದಾರೆ. ಇದನ್ನು ನಾವು ಉಳಿಸಿಕೊಳ್ಳಬೇಕು, ಉಳಿಸಿಕೊಳ್ಳುತ್ತೇವೆ. ಇದು ಕಾರ್ಯಕರ್ತರ ಹಾಗೂ ಮತದಾರರ ಪಕ್ಷ. ಇದಕ್ಕೆ ತನ್ನದೇ ಆದ ದೊಡ್ಡ ಇತಿಹಾಸವಿದೆ. ಯಾರೇ ಇರಲಿ, ಹೋಗಲಿ ತನ್ನನ್ನು ತಾನು ಉಳಿಸಿಕೊಳ್ಳುವ ಶಕ್ತಿ ಈ ಪಕ್ಷಕ್ಕೆ ಇದೆ. ಮಹಾತ್ಮಾ ಗಾಂಧೀಜಿ ಅವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಅಧಿಕಾರವನ್ನು ತ್ಯಾಗ ಮಾಡಿದ್ದಾರೆ. ಅಂಬೇಡ್ಕರ್ ಅವರು ಸಂವಿಧಾನ ಕೊಟ್ಟರು ಅವರು ಯಾವ ಅಧಿಕಾರ ಪಡೆದಿದ್ದಾರೆ? ನಾವು ಅವರನ್ನೆಲ್ಲ ಸ್ಮರಿಸಬೇಕು. ಹೀಗಾಗಿ ಮಾಧ್ಯಮಗಳ ಮುಂದೆ ಮಾತನಾಡುವುದಕ್ಕಿಂತ ಪಕ್ಷ ಬಹಳ ಮುಖ್ಯ ಎಂದು ನಾನು ಬಹಳ ನಮ್ರತೆಯಿಂದ ಮನವಿ ಮಾಡುತ್ತೇನೆ. ಯಾರಿಗಾದರೂ ಏನೇ ಸಮಸ್ಯೆ ಇದ್ದರೂ ಹೈಕಮಾಂಡ್ ಜತೆ ಚರ್ಚಿಸಿ ಬಗೆಹರಿಸಿಕೊಳ್ಳಿ. ಪುಟ 2



ಗಣರಾಜ್ಯೋತ್ಸವದ ಪ್ರಯುಕ್ತ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಮಹರ್ಷಿ ವಾಲ್ಮೀಕಿ ವಿಷಯಾಧಾರಿತ 217ನೇ ಫಲ ಪುಷ್ಪ ಪ್ರದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿಗಳು, ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿಗಳು, ತೋಟಗಾರಿಕಾ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ವಸತಿ ಸಚಿವರಾದ ಜಮೀರ್ ಅಹ್ಮದ್ ಖಾನ್, ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಹೈಕಮಾಂಡ್‌ಗೆ ಯಾರ್ ಬೇಕಾದ್ರೂ ವರದಿ ಕೊಡಲಿ

**ಬೆಂಗಳೂರು:** ಹೈಕಮಾಂಡ್ಗೆ ವರದಿ ಕೊಡಲಿ. ವರದಿ ಕೊಡೋದನ್ನು ಯಾರು ಬೇಡ ಅಂತಾರೆ. ಹೈಕಮಾಂಡ್ಗೆ ವರದಿ ಕೊಡಲು ಇವರಿದ್ದಾರೆ, ಪಡೆಯಲು ಅವರಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಮಾಧ್ಯಮ ಪ್ರಕಟಣೆ ವಿಚಾರವಾಗಿ ಗೃಹ ಸಚಿವ ಜಿ.ಪರಮೇಶ್ವರ್ ಸೂಚ್ಯವಾಗಿ ಉತ್ತರಿಸಿದರು.

ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳಿಗೆ ಪರಮೇಶ್ವರ್ ಅವರು ಪ್ರತಿಕ್ರಿಯೆ ನೀಡಿದರು. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿ, ಬದಲಾವಣೆ ಯಾವಾಗ ಅಂತ ಗೊತ್ತಿಲ್ಲ. ಲೋಕಸಭೆ ನಂತರ ಬದಲಾವಣೆ ಆಗುತ್ತೆ ಅಂತ ಸತೀಶ್ ಜಾರಕಿಹೊಳಿ ಹೇಳಿದ್ದು ನಾನು ನೋಡಿದೆ. ಅದರ ಬಗ್ಗೆ ನನಗೇನೂ ಗೊತ್ತಿಲ್ಲ. ಡಿಕೆಶಿ ಈಗ ಅಧ್ಯಕ್ಷರಿದ್ದಾರೆ, ಎರಡು ದೊಡ್ಡ ಖಾತೆ ಇದೆ. ಸಹಜವಾಗಿ ಅಧ್ಯಕ್ಷ ಸ್ಥಾನ ಬದಲಾಯಿಸಿ ಅಂತ ಬೇರೆಯವರು ಕೇಳ್ತಾರೆ. ನಾನು ಅಧ್ಯಕ್ಷ ಇದ್ದಾಗಲೂ ಬದಲಾಯಿಸಿ ಅಂತ ಹೇಳಿದ್ರು. ಆಗ ನಾನು ಪಕ್ಷಕ್ಕೆ ಪ್ರಾಮುಖ್ಯತೆ ಕೊಟ್ಟು ಸಚಿವ ಸ್ಥಾನಕ್ಕೆ ರಾಜೀನಾಮೆ



ಕೊಟ್ಟಿದ್ದೆ. ಮಂತ್ರಿ ಅಥವಾ ಅಧ್ಯಕ್ಷಗಿರಿ ಪೈಕಿ ಒಂದು ಆಯ್ಕೆ ಮಾಡಿಕೊಳ್ಳಿ ಅಂತ ಆಗ ನನಗೆ ಹೇಳಿದ್ರು, ನಾನು ಅಧ್ಯಕ್ಷ ಸ್ಥಾನ ಆರಿಸಿದ್ದೆ. ಈಗಲೂ ಅದನ್ನೇ ಬಯಸ್ತಿದ್ದಾರೆ. ಅವರಿಗೂ ಒತ್ತಡ ಇರುತ್ತೆ. ಡಿಕೆಶಿಗೆ ಎರಡು ದೊಡ್ಡ ಖಾತೆ ಇದೆ, ಪಕ್ಷ ಸಂಘಟಿಸುವ ದೊಡ್ಡ ಜವಾಬ್ದಾರಿ ಸಹ ಇದೆ. ಹೈಕಮಾಂಡ್ನವರು ಏನು ತೀರ್ಮಾನ ಮಾಡ್ತಾರೋ ನೋಡಬೇಕು ಎಂದು ಹೇಳಿದರು.

ಹೈಕಮಾಂಡ್ ಗಮನಿಸುತ್ತದೆ : ಡಿಕೆಶಿ ಪಕ್ಷ ಸಂಘಟನೆ ಸರಿಯಾಗಿ ಮಾಡ್ತಿಲ್ಲ ಎಂಬ ಆರೋಪ ವಿಚಾರವಾಗಿ ಮಾತನಾಡಿ, ಹೈಕಮಾಂಡ್ನವರು ಅದನ್ನೆಲ್ಲ ಗಮನಿಸ್ತಿದ್ದಾರಲ್ಲ. ನಾವು ಒಂದು ಸಮುದಾಯ ಸೇರಿ ಸಭೆ ಮಾಡ್ತೀವಿ ಅಂದಿದ್ದನ್ನು ಹೈಕಮಾಂಡ್ ಗಮನಿಸಿದೆ. ಹಾಗೆಯೇ ಪಕ್ಷ ಸಂಘಟನೆ ಆಗ್ತಿದೆಯಾ ಇಲ್ವಾ ಅಂತನೂ ಹೈಕಮಾಂಡ್ನವರು ಗಮನಿಸ್ತಾರೆ. ಆ ಸಂದರ್ಭದಲ್ಲಿ ಅವರು ತೀರ್ಮಾನ ತಗೋತಾರೆ ಎಂದರು.

ಜಾತಿ ಜನಗಣತಿ ವರದಿ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಈ ಬಗ್ಗೆ ಸಿಎಂ ಈಗಾಗಲೇ ಹೇಳಿದ್ದಾರೆ. ಯಾವ ಕಾರಣಕ್ಕೆ ಅದರ ಚರ್ಚೆ ಇವತ್ತಾಗ್ತಿಲ್ಲ ಅಂತ ಗೊತ್ತಿಲ್ಲ. ಸಂಪುಟ ಸಭೆಗೆ ಹೋದಾಗ ಯಾಕೆ, ಏನು ಅಂತ ಗೊತ್ತಾಗುತ್ತೆ. ಒಕ್ಕಲಿಗರು, ಲಿಂಗಾಯತರನ್ನು ಡಿಗ್ರೇಡ್ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ. ವರದಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಕೆ ಆಗಿದೆ. ವರದಿ ಜಾರಿಯಾಗದಂತೆ ಪುಟ 2

### ಪರಿಷತ್ ಮಾಜಿ ಸದಸ್ಯ ಪಟೇಲ್ ಶಿವರಾಂ ವಿಧಿವಶ

**ಹಾಸನ:** ಮಾಜಿ ವಿಧಾನ ಪರಿಷತ್ ಸದಸ್ಯ ಹಾಗೂ ಅಪೆಕ್ಸ್ ಬ್ಯಾಂಕ್ ಹಾಲಿ ನಿರ್ದೇಶಕ ಪಟೇಲ್ ಶಿವರಾಂ



(75) ಇಂದು ವಿಧಿವಶರಾಗಿದ್ದಾರೆ. ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಪಟೇಲ್ ಶಿವರಾಂ ಅವರು ಹಾಸನ ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ತಮ ನಿವಾಸದಲ್ಲಿ ಇಂದು ಹೃದಯಾ ಘಾತದಿಂದ ನಿಧರಾಗಿದ್ದಾರೆ. ಮೂವರು ಹೆಣ್ಣು ಮಕ್ಕಳು, ಓರ್ವ ಪುತ್ರ ಹಾಗೂ ಪತ್ನಿಯನ್ನು ಅಗಲಿದ್ದಾರೆ. ಹಾಸನ ಜಿಲ್ಲೆಯ ಪ್ರಭಾವಿ ಜೆಡಿಎಸ್ ಮುಖಂಡರಾಗಿದ್ದ ಅವರು 2010-2016 ರವರೆಗೆ ಪುಟ 2

### ಪೋಕ್ಸೋ; ಆರೋಪಿ ಕಾಲಿಗೆ ಗುಂಡೇಟು


**ಬಳ್ಳಾರಿ:** ಪಂಚನಾಮೆ ವೇಳೆ ತಪ್ಪಿಸಿಕೊಳ್ಳಲು ಯತ್ನಿಸಿದ ಪೋಕ್ಸೋ ಪ್ರಕರಣದ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಸೆರೆ ಹಿಡಿದಿರುವ ಘಟನೆ ಜಿಲ್ಲೆಯಲ್ಲಿ ನಡೆದಿದೆ. ಈ ಘಟನೆ ಬಗ್ಗೆ ಪೊಲೀಸರು ಮಾಹಿತಿ ನೀಡಿದ್ದಾರೆ. ಆರೋಪಿ ಮಂಜುನಾಥ್ನನ್ನು ಸದ್ಯ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ (ವಿಮ್ಸ್) ದಾಖಲಿಸಲಾಗಿದೆ. ಆರೋಪಿ ಮಂಜುನಾಥ್ ಇತ್ತೀಚೆಗೆ 5 ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ ತಲೆಮರೆಸಿಕೊಂಡಿದ್ದನು. ಪೊಲೀಸರು ಆರೋಪಿಯನ್ನು ಬುಧವಾರ ರಾತ್ರಿ ಪುಟ 2

## ಕೆಪಿಎಸ್ಸಿ ವಿಚಾರದಲ್ಲಿ ಹುಡುಗಾಟಿಕೆ ಬೇಡ

**ಬೆಂಗಳೂರು:** ಕೆಪಿಎಸ್ಸಿ ಪರೀಕ್ಷೆ ವಿಚಾರದಲ್ಲಿ ಹುಡುಗಾಟಿಕೆ ಸರಿಯಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ಫ್ರೀಡಂ ಪಾರ್ಕ್ ನಲ್ಲಿ ನಡೆಯುತ್ತಿರುವ ಕೆಪಿಎಸ್ಸಿ ವಿದ್ಯಾರ್ಥಿಗಳ ಪ್ರತಿಭಟನಾ ಸ್ಥಳಕ್ಕೆ ಇಂದು ಭೇಟಿ ನೀಡಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು. ರಾಜ್ಯ ಸರಕಾರಕ್ಕೆ ಬುದ್ಧಿ ಹೇಳುವ ದೃಷ್ಟಿಯಿಂದ ಹೋರಾಟಕ್ಕೆ ಬೆಂಬಲ ನೀಡಿದ್ದಾಗಿ ತಿಳಿಸಿದರು.

ರಾಜ್ಯ ವಿದ್ಯಾರ್ಥಿಗಳ ಒಕ್ಕೂಟದಿಂದ ಕೆಪಿಎಸ್ಸಿ ಯಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಖಂಡಿಸಿ ಹೋರಾಟ ನಿರತರಾಗಿದ್ದಾರೆ. ಪದೇಪದೇ ಪರೀಕ್ಷೆ ಮುಂದೂಡುವುದು, ಪ್ರಶ್ನೆಪತ್ರಿಕೆಗಳ ಸೋರಿಕೆ, ಪ್ರಶ್ನೆಪತ್ರಿಕೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಆಗುತ್ತಿರುವ ಸಮಸ್ಯೆಗಳ ವಿರುದ್ಧ ಸಮಸ್ತಾರು ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದಾರೆ.




ರಾಜ್ಯ ಸರಕಾರದ ವಿರುದ್ಧ ಹೋರಾಟ ನಡೆಯುತ್ತಿದೆ ಎಂದು ವಿವರಿಸಿದರು.

ನಾನು, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಯುವ ಪುಟ 2

### ಎಟಿಎಂಗೆ ಹಣ ಸಾಗಿಸುವಾಗ ಗುಂಡಿನ ದಾಳಿ: ಓರ್ವ ಸಾವು

**ಬೀದರ್:** ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಎಟಿಎಂಗೆ ಹಾಕಲು ಸಾಗಿಸುತ್ತಿದ್ದ ಹಣವನ್ನು ಸಿನಿಮಾ ಶೈಲಿಯಲ್ಲಿ ಲೂಟಿ ಮಾಡಿ ಪರಾರಿಯಾದ ಘಟನೆ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ನಡೆದಿದೆ. ಈ ವೇಳೆ ಎಸ್ಬಿಐ ಸೆಕ್ಯೂರಿಟಿ ಏಜೆನ್ಸಿ ಸಿಬ್ಬಂದಿ ಮೇಲೆ ಖಾರದ ಪುಡಿ ಎರಚಿ, ಗುಂಡು ಹಾರಿಸಿದ್ದರಿಂದ



ಓರ್ವ ಸ್ಥಳದಲ್ಲೇ ಸಾವನ್ನಪ್ಪಿದರೆ, ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.ನಗರದ ಶಿವಾಜಿ ಸರ್ಕಲ್ ಬಳಿಯ ಹೃದಯ ಭಾಗದಲ್ಲಿರುವ ಎಸ್ಬಿಐ ಬ್ಯಾಂಕ್ ಮೇನ್ ಬ್ರ್ಯಾಂಚ್ ಮುಂದೆ ಘಟನೆ ನಡೆದಿದೆ. ಮೃತ ವ್ಯಕ್ತಿ ಗಿರೀಶ್ ಎಂದು ಗುರುತಿಸಲಾಗಿದೆ. ಶಿವಾ ಕಾಶಿನಾಥ ಎಂಬ ಸಿಬ್ಬಂದಿ ಗಾಯಗೊಂಡಿದ್ದಾರೆ. ಬ್ಯಾಂಕಿನ ಕಚೇರಿ ಎದುರು ಗಿರೀಶ್ ಮೃತದೇಹ ಪುಟ 2

## ಲಾಲ್‌ಬಾಗ್‌ನಲ್ಲಿ ಇಂದಿನಿಂದ ಫಲಪುಷ್ಪ ಪ್ರದರ್ಶನ

**.ಬೆಂಗಳೂರು:** 76ನೇ ಗಣರಾಜ್ಯೋತ್ಸವ ಅಂಗವಾಗಿ ನಗರದ ಪುಷ್ಪ ಕಾಶಿ ಎಂದೇ ಖ್ಯಾತಿ ಪಡೆದಿರುವ ಲಾಲ್ಬಾಗ್ನ ಗಾಜಿನ ಮನೆಯಲ್ಲಿ ರಾಮಾಯಣದ ಕರ್ತೃ ಆದಿಕವಿ ಮಹರ್ಷಿ ವಾಲ್ಮೀಕಿ ವಿಷಯಾಧಾರಿತ ಫಲಪುಷ್ಪ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಪ್ರದರ್ಶನಕ್ಕೆ ಬರುವವರಿಗೆ ಇದೇ ಮೊದಲ ಬಾರಿಗೆ ಕ್ಯೂಆರ್ ಕೋಡ್ನ ಮೂಲಕ ಟಿಕೆಟ್ ಖರೀದಿಗೆ ಅವಕಾಶ ಮಾಡಿಕೊಡಲಾಗಿದೆ.

ಲಾಲ್ಬಾಗ್ ಗಾಜಿನ ಮನೆಯಲ್ಲಿ ಇಂದಿನಿಂದ (ಜ.16) ನಡೆಯುವ 217ನೇ ಫಲಪುಷ್ಪ ಪ್ರದರ್ಶನ ಕುರಿತಂತೆ ತೋಟಗಾರಿಕಾ ಇಲಾಖೆಯ ಮಾಹಿತಿ ಕೇಂದ್ರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇಲಾಖೆಯ ನಿರ್ದೇಶಕ ಡಿ.ಎಸ್.ರಮೇಶ್, ಫಲ ಪುಷ್ಪ ಪ್ರದರ್ಶನಕ್ಕೆ ಪ್ರತಿಯೊಂದು ಬಾರಿಯೂ ಒಂದೊಂದು




ರೀತಿಯ ವಿಷಯಾಧಾರಿತ ವಸ್ತುನ್ನು ಆಯ್ಕೆ ಮಾಡಲಾಗುತ್ತಿದೆ. ಆದ್ರೂ ಸಹ ಪ್ರಸಕ್ತ ವರ್ಷ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಮತ್ತು ಪರಿಸರವಾದಿ ಯಲ್ಲಪ್ಪರೆಡ್ಡಿ ಅವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿಯು ವಾಲ್ಮೀಕಿ ಕುರಿತ ಪ್ರದರ್ಶನ ಹಮ್ಮಿಕೊಳ್ಳುವುದಕ್ಕೆ ಸೂಚಿಸಿದ್ದರು ಎಂದು ಹೇಳಿದರು.

ಅಲ್ಲದೆ, ಲಾಲ್ ಬಾಗ್ ಈವರೆಗೂ ನಡೆದ ಫಲಪುಷ್ಪ ಪ್ರದರ್ಶನಕ್ಕೆ ಆಫ್ ಲೈನ್ ಮತ್ತು ಆನ್ ಲೈನ್ನಲಿ ಅವಕಾಶ ಕಲ್ಪಿಸಲಾಗಿತ್ತು. ನಾಲ್ಕು ದ್ವಾರಗಳಲ್ಲಿ ಟಿಕೆಟ್ ಕೌಂಟರ್ಗಳನ್ನು ಅಳವಡಿಸಿ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಕಲ್ಪಿಸಿಕೊಟ್ಟಿತ್ತು. ಆದರೆ ಇದೇ ಮೊದಲ ಬಾರಿಗೆ ಕ್ಯೂ.ಆರ್. ಕೋಡ್ ಮೂಲಕ ಪ್ರದರ್ಶನನಕ್ಕೆ ಟಿಕೆಟ್ ಖರೀದಿಗೆ ಅವಕಾಶ ಮಾಡಿಕೊಡಲಾಗಿದೆ. ಅದರಂತೆ ನಗರದ ಬಸ್ ನಿಲ್ದಾಣಗಳು, ಪುಟ 2

## ಮೊದಲ ಪುಟದಿಂದ

## ಕೆಪಿಸಿಸಿ ಹುದ್ದೆ ಮಾರಾಟಕ್ಕಿಲ್ಲ

ಸದ್ಯಕ್ಕೆ ನಾವು ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶದ ಸಿದ್ಧತೆಯಲ್ಲಿದ್ದು, ಇದರ ಪರಿಶೀಲನೆಗೆ ಸುರ್ಜೆವಾಲ ಅವರು ಶುಕ್ರವಾರ ಬೆಳಗಾವಿಗೆ ಆಗಮಿಸಲಿದ್ದಾರೆ. ನಿಮ್ಮ ಪ್ರಶ್ನೆಗಳು ಏನೇ ಇದ್ದರೂ ಅವರನ್ನು ಕೇಳಿ" ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಶ್ನೆ ಮಾಡುವುದು ಸರಿಯಲ್ಲ: ಪಕ್ಷದ ಸಂಘಟನೆ ಕುಂಠಿತವಾಗಿದೆ, ಪಕ್ಷಕ್ಕೆ ಪೂರ್ಣಪ್ರಮಾಣದ ಅಧ್ಯಕ್ಷರು ಬೇಕು ಎಂಬ ಸತೀಶ್ ಜಾರಕಿಹೊಳಿ ಹೇಳಿಕೆ ನೀಡಿದ್ದು, ಈ ಬಗ್ಗೆ ಸ್ಪಷ್ಟನೆ ನೀಡಿ ಎಂದು ಕೇಳಿದಾಗ, "ಈ ಬಗ್ಗೆ ಸ್ಪಷ್ಟನೆ ನೀಡಬೇಕಿರುವುದು ನಾನಲ್ಲ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು. ಈ ವಿಚಾರವಾಗಿ ಅವರ ಬಳಿ ಕೇಳಿ. ಅವರ ನಿರ್ಧಾರವನ್ನು ಪ್ರಶ್ನೆ ಮಾಡಲಾಗುತ್ತಿದೆ. ಈ ರೀತಿ ಮಾಡಬಾರದು" ಎಂದು ತಿಳಿಸಿದರು

**ಹೈಕಮಾಂಡ್‌ಗೆ ಯಾರ್ ಬೇಕಾದ್ರೂ ವರದಿ ಕೊಡಲಿ:** ಯಾರ ಒತ್ತಡವೂ ಇಲ್ಲ. ಈ ಸಭೆಗಲ್ಲದಿದ್ದರೆ ಮುಂದಿನ ಸಭೆಯಲ್ಲಿ ಚರ್ಚೆ ನಡೆಯುತ್ತೆ. ವರದಿ ಬಗ್ಗೆ ಹೆಚ್ಚಿಕೆ ಒಂದು ಮಾತು, ಅಶೋಕ್ ಇನ್ನೊಂದು ಮಾತು ಆಡಿದ್ದಾರೆ. ಅವರಿಗೆ ಏನು ಅನ್ನಿಸ್ತೋ ಮಾತಾಡಿದ್ದಾರೆ ಎಂದು ಪ್ರತಿಕ್ರಿಯೆ ನೀಡಿದರು. ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣ ಹೆಚ್ಚಳ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಮಕ್ಕಳು, ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳನ್ನು ನೋಡ್ತಿದ್ರೆ ನಮ್ಮ ಮನಃಸ್ಥಿತಿಗಳು ಬದಲಾಗ್ತಿವೆ ಅಂತ ತೋರಿಸುತ್ತದೆ. ಇದು ಸಮಾಜದ ದೊಡ್ಡ ಸಮಸ್ಯೆ. ಬಹಳ ದೊಡ್ಡ ಪ್ರಮಾಣದಲ್ಲಿ ಕ್ರಮ ಆಗಬೇಕು. ಶಾಲೆ, ಕಾಲೇಜು, ವಿವಿಗಳಲ್ಲಿ ಅರಿವು ಮೂಡಿಸೋದು, ಸುದೀರ್ಘ ಪ್ರಯತ್ನ ಮಾಡಬೇಕಾಗುತ್ತದೆ. ಪೊಲೀಸರಿಂದ ಮಾತ್ರನೇ ನಿಯಂತ್ರಣ ಆಗಲ್ಲ. ಸಮಾಜವೂ ಕೈಜೋಡಿಸಬೇಕು. ಇದು ಸಮಾಜದ ಅತೀ ದೊಡ್ಡ ಸಮಸ್ಯೆ. ಜನ ಬದಲಾಗಬೇಕಾಗುತ್ತದೆ ಎಂದು ತಿಳಿಸಿದರು.

## ಗುಂಡಿನ ದಾಳಿ: ಓರ್ವ ಸಾವು

ರಕ್ತಸಿಕ್ತವಾಗಿ ಬಿದ್ದಿರುವುದು ಕಂಡುಬಂದಿದ್ದು, ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಕಣ್ಣಿಗೆ ಖಾರದಪುಡಿ ಎರಚಿ ಸುಮಾರು 93 ಲಕ್ಷ ರೂ. ಹಣವನ್ನು ದೋಚಿದ್ದಾರೆ

ಪ್ರತ್ಯಕ್ಷದರ್ಶಿ ಹೇಳಿದ್ದೇನು? ಸಿಎಂಎಸ್ ಏಜೆನ್ಸಿ ಸಿಬ್ಬಂದಿ ಎಂದಿನಂತೆ ಬ್ಯಾಂಕ್ನಿಂದ ಎಟಿಎಂಗೆ ಹಣ ವರ್ಗಾಯಿಸಲು ವಾಹನದಲ್ಲಿ ಬಂದಿದ್ದರು. ಆಗ ಬೈಕಿನಲ್ಲಿ ಬಂದ ಅಪರಿಚಿತರು ಹಣ ಕಸಿದುಕೊಳ್ಳಲು ಯತ್ನಿಸಿದ್ದಾರೆ. ಹಣ ಕೊಡದಿದ್ದಾಗ ಆರು ಸುತ್ತು ಫೈರಿಂಗ್ ಮಾಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ. ಸ್ಥಳಕ್ಕೆ ಜಿಲ್ಲಾ ಎಸ್ಪಿ ಪ್ರದೀಪ ಗುಂಟೆ, ಅಡಿಷನಲ್ ಎಸ್ಪಿ ಚಂದ್ರಕಾಂತ ಪೂಜಾರಿ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಬ್ಯಾಂಕ್ ಸಿಸಿಟಿವಿ ಪರಿಶೀಲನೆ ನಡೆಸಿದ್ದಾರೆ.

ಕಾಲಿಗೆ ಗುಂಡೇಟು

ತೋರಣಗಲ್ಲಿನಲ್ಲಿ ಬಂಧಿಸಿದ್ದರು. ಪುಟ 2 ಆತನನ್ನು ಪಂಚನಾಮೆಗೆ ಕರೆದೊಯ್ಯಲಾಗಿತ್ತು. ಈ ವೇಳೆ ಪೊಲೀಸರ ಮೇಲೆ ಹಲ್ಲೆ ಮಾಡಿ ಆರೋಪಿ ತಪ್ಪಿಸಿಕೊಳ್ಳಲು ಯತ್ನಿಸಿದ್ದನು. ಆಗ ಸಿಬ್ಬಂದಿ ಆರೋಪಿ ಕಾಲಿಗೆ ಗುಂಡಿನೇಟು ಹೊಡೆಯಬೇಕಾಯಿತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ತಿಳಿಸಿದ್ದಾರೆ.

## ಶಿವರಾಂ ವಿಧಿವಶ

ವಿಧಾನ ಪರಿಷತ್ ಸದಸ್ಯರಾಗಿದ್ದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹಾಗೂ ಅವರ ಕುಟುಂಬದ ಆಪ್ತರಾಗಿದ್ದ ಪಟೇಲ್ ಪುಟ 2

ಶಿವರಾಂ ಅವರು, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ, ನಿರ್ದೇಶಕ, ಹಾಸನ ಹಾಲು ಒಕ್ಕೂಟದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ಹಾಸನ ಜಿಲ್ಲಾ ಪರಿಷತ್ ಸದಸ್ಯರಾಗಿ, ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಎರಡು ಬಾರಿ ಹಾಸನ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ರೈತಪರ ಕೆಲಸ ಮಾಡಿದ್ದ ಶ್ರೀಯುತರು, ಹಾಲಿ ಬ್ಯಾಂಕ್ ಕಟ್ಟಡ ಕಟ್ಟುವ ಮೂಲಕ ತಮ ಹೆಸರು ಸದಾ ಉಳಿಯುವಂತೆ ಮಾಡಿದ್ದಾರೆ. ಹಾಲಿ ಅಪೆಕ್ಸ್ ನಿರ್ದೇಶಕರಾಗಿದ್ದರು. ಹಿಂದೆ ದೆಹಲಿಯ ಕ್ರಿಪ್ಕೋ ಸದಸ್ಯರೂ ಆಗಿದ್ದರು. ಒಂದು ಬಾರಿ ವಿಧಾನ ಪರಿಷತ್ ಸದಸ್ಯರಾಗಿದ್ದ ಶಿವರಾಂ ಅವರು ಎರಡು ಬಾರಿ ಪರಾಭವಗೊಂಡಿದ್ದರು.

ಅಂತಿಮ ದರ್ಶನ : ಶಾಸಕರಾದ ಹೆಚ್.ಡಿ.ರೇವಣ್ಣ, ಸಿ.ಎನ್.ಬಾಲಕೃಷ್ಣ, ಎಚ್.ಪಿ.ಸ್ವರೂಪ್‌ಪ್ರಕಾಶ್, ಮಾಜಿ ಸಚಿವರಾದ ಎಚ್.ಕೆ.ಕುಮಾರಸ್ವಾಮಿ, ಹಾಸನ ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ನಿವಾಸದಲ್ಲಿ ಪಟೇಲ್ ಶಿವರಾಂ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದು ಕಂಬನಿ ಮಿಡಿದರು.

ದೇವೇಗೌಡರ ಸಂತಾಪ : ಪಟೇಲ್ ಶಿವರಾಂ ಅವರ ನಿಧನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.ಜಿಲ್ಲೆಯ ಹಿರಿಯ ರಾಜಕಾರಣಿ, ಸರಳರು, ಸಜ್ಜನರಾಗಿದ್ದ ಪಟೇಲ್ ಶಿವರಾಂ ಅಗಲಿಕೆಯು ಅತೀವ ದುಃಖ ತಂದಿದೆ ಎಂದು ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ನನ್ನೊಂದಿಗೆ ಹಲವು ದಶಕಗಳ ಕಾಲ ಜೊತೆಯಾಗಿ ಕೆಲಸ ಮಾಡಿದ್ದ ಶಿವರಾಂ ಅವರು ಅತ್ಯಂತ ಪ್ರಾಮಾಣಿಕವಾಗಿ ಪಕ್ಷ ಸಂಘಟನೆಗೆ ದುಡಿದಿದ್ದರು. ಅವರೆಂದೂ ಅಧಿಕಾರಕ್ಕಾಗಿ ಹಪಾಹಪಿಸಿದವರಲ್ಲ. ಸಿಕ್ಕ ಅವಕಾಶಕ್ಕೆ ನ್ಯಾಯ ಒದಗಿಸುವ ಕೆಲಸ ಮಾಡಿದ್ದಾರೆ ಎಂದು ಅವರು ಸರಿಸಿದ್ದಾರೆ.

ಜಿಲ್ಲೆಯ ಹಿರಿಯ ರಾಜಕಾರಣಿ, ಸರಳರು, ಸಜ್ಜನರು, ನಮ ತಂದೆಯವರ ಆತಿ[illegible]ಯರೂ ಆಗಿದ್ದ ಹಿರಿಯರಾದ ಪಟೇಲ್ ಶಿವರಾಂ ಅಗಲಿಕೆ ಅತೀವ ದುಃಖ ತಂದಿದೆ ಎಂದು ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಸಂತಾಪ ಸೂಚಿಸಿದ್ದಾರೆ. ನಮ ಪಕ್ಷದಲ್ಲಿ ಹಲವು ದಶಕಗಳ ಕಾಲ ಇದ್ದ ಶಿವರಾಂ ಅವರು ಹಾಸನ ಜಿಲ್ಲೆಯಲ್ಲಿ ನಮ ಪಕ್ಷ ಸಂಘಟನೆಗೆ ಅತ್ಯಂತ ಪ್ರಾಮಾಣಿಕವಾಗಿ ಪಕ್ಷಕ್ಕಾಗೊ ದುಡಿದಿದ್ದರು. ಹಾಸನ ಜಿಲ್ಲಾ ಪರಿಷತ್ ಸದಸ್ಯರಾಗಿ, ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದು ಅವರು ಗುಣಗಾನ ಮಾಡಿದ್ದಾರೆ. ಎರಡು ಬಾರಿ ಹಾಸನ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷರಾಗಿ ರೈತಪರ ಕೆಲಸ ಮಾಡಿದ್ದ ಅವರು, ಹಾಲಿ ಬ್ಯಾಂಕ್ ಕಟ್ಟಡ ಕಟ್ಟಿದ ಹಿರಿಮೆ ಅವರದು. ಅವರ ಮಾರ್ಗದರ್ಶನದಿಂದ ನಾನು ಸಾಕಷ್ಟು ಕಲಿತಿದ್ದೇನೆ. ಮುಂದೆಯೂ ಅವರ ಆದರ್ಶ ಅಳವಡಿಸಿಕೊಳ್ಳುತ್ತೇನೆ. ಅವರ ನಿಧನ ವೈಯಕ್ತಿಕವಾಗಿ ನನಗೆ ನಷ್ಟ ಉಂಟುಮಾಡಿದೆ. ಅವರ ಆತಕ್ಕೆ ದೇವರು ಚಿರಶಾಂತಿ ಕರುಣಿಸಲಿ. ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

# ಚೀನಾದಿಂದ ಬೆಂಗಳೂರಿಗೆ ಬಂದ ಮೊದಲ ಪ್ರೊಟೋಟೈಪ್ ಕೋಚಗಳು

**ಬೆಂಗಳೂರು:** ನಮ್ಮ ಮೆಟ್ರೋ ನೇರಳೆ ಮಾರ್ಗಕ್ಕಾಗಿ ಚೀನಾದ ಸಿಆರ್‌ಸಿ ನಿರ್ಮಿತ ಆರು ಬೋಗಿಗಳ ಮೊದಲ ಪ್ರೊಟೋಟೈಪ್ ರೈಲು ಬಂದಿದ್ದು, ಪೀಣ್ಯ ಮೆಟ್ರೋ ಡಿಪೋದಲ್ಲಿ ಇದನ್ನು ಜೋಡಿಸಿಕೊಂಡು ಪರೀಕ್ಷಾರ್ಥ ಟ್ರ್ಯಾಕ್ಗೆ ಸ್ಥಳಾಂತರಿಸಲಾಗಿದೆ.

ಚೀನಾದಿಂದ ಚೆನ್ನೈ ಬಂದರಿಗೆ ಬಂದ ಆರು ಬೋಗಿಗಳನ್ನು ಟ್ರಕ್ ಮೂಲಕ ರಸ್ತೆ ಮಾರ್ಗದಲ್ಲಿ ಬೆಂಗಳೂರಿಗೆ ತರಲಾಗಿದೆ. ಬೆಂಗಳೂರು ಮೆಟ್ರೋ ರೈಲು ನಿಗಮ ಇವನ್ನು ಸ್ವೀಕರಿಸಿವೆ. ಚೀನಾದಿಂದ ಬಂದ ಮೊದಲ ಡಿಸ್ಟೆನ್ಸ್ ಟು ಗೋ (ಡಿಟಿಜಿ) ತಂತ್ರಜ್ಞಾನ ಸ್ವರೂಪದ ರೈಲು ಇದಾಗಿದೆ. ಎಲೆಕ್ಟ್ರಿಕಲ್ ಪರೀಕ್ಷೆ ಸೇರಿದಂತೆ ಮುಂದಿನ ಕೆಲ ತಿಂಗಳ ಕಾಲ ಸುಮಾರು 37 ಬಗೆಯ ವಿವಿಧ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಈ ರೈಲು ಪ್ರಯಾಣಿಕ ಸೇವೆಗೆ ಬರಲು ಆರು ತಿಂಗಳು ಆಗಲಿದೆ. ಯಾವುದೇ ಹೊಸ ಮಾದರಿ ರೈಲು ಬಂದರೂ ಕೂಡ ಸಂಚಾರಕ್ಕೆ ಮೊದಲು ರಿಸರ್ಚ್ ಡಿಸೈನ್ ಆಂಡ್ ಸ್ಟ್ಯಾಂಡರ್ಡ್ಸ್ ಆರ್ಗನೈಸೇಶನ್ ಪ್ರಮಾಣ ಪತ್ರ ಅಗತ್ಯವಾಗಿದೆ. ಪರೀಕ್ಷೆಗಳ ಬಳಿಕ ರಾತ್ರಿಯ ವೇಳೆ ಮುಖ್ಯ ಲೈನ್ನಲ್ಲಿ ಪ್ರಾಯೋಗಿಕ ಸಂಚಾರ ನಡೆಸಲಾಗುವುದು. ಬಳಿಕ ಹೊಸ ರೈಲುಗಳಿಗಾಗಿ ಲೋಕೋಪೈಲಟ್ಗಳ ನೇಮಕಾತಿ ಮಾಡಿಕೊಂಡು ಅವರಿಗೆ ತರಬೇತಿ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದೆ.

**ನೂತನ ಮೆಟ್ರೋ ಫೀಡರ್ ಮಾರ್ಗ ಪರಿಚಯಿಸಲು ಮುಂದಾದ ಬಿಎಂಟಿಸಿ:** ಮಹಾನಗರ ಸಾರಿಗೆ ಸಂಸ್ಥೆ ಸಾರ್ವಜನಿಕ ಪ್ರಯಾಣಿಕರಿಗೆ ದಕ್ಷ, ವಿಶ್ವಾಸನೀಯ, ಆರಾಮದಾಯಕ ಹಾಗೂ ಮಿತವ್ಯಯಕರ ದರದಲ್ಲಿ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸಲು ನೂತನ ಮೆಟ್ರೋ ಫೀಡರ್ ಮಾರ್ಗವನ್ನು ಪರಿಚಯಿಸಲು ಮುಂದಾಗಿದೆ.

ಬೆಂ.ಮ.ಸಾ. ಸಂಸ್ಥೆಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹವಾ ನಿಯಂತ್ರಣ ರಹಿತ ಸೇವೆ ಹೊಂದಿರುವ ನೂತನ ಮೆಟ್ರೋ ಫೀಡರ್ ಮಾರ್ಗವನ್ನು ಇಂದಿನಿಂದ ಪರಿಚಯಿಸುತ್ತಿದೆ. ಎಂಎಫ್–8ಎ ಕ್ರಮ ಸಂಖ್ಯೆಯ ವಾಹನ ಮಂತ್ರಿ ಮಾಲ್ ಮೆಟ್ರೋ ನಿಲ್ದಾಣದಿಂದ ಶಿವಾಜಿನಗರದ ವರೆಗೆ ಸಂಚರಿಸಲಿದೆ. ಮಾರ್ಗ ಮಧ್ಯ ಮಲ್ಲೇಶ್ವರಂ ಸರ್ಕಲ್, ಗುಟ್ಟಹಳ್ಳಿ, ವೌಂಟ್ ಕಾರ್ಮೆಲ್ ಕಾಲೇಜು, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆಯಾಗಲಿದೆ.

ಮಂತ್ರಿ ಮಾಲ್ ಮೆಟ್ರೋ ನಿಲ್ದಾಣದಿಂದ ಬೆಳಗ್ಗೆ 7.15 ಮತ್ತು 8.45, ಮಧ್ಯಾಹ್ನ 12.15, 1.30, 2.40 ಕ್ಕೆ ಮತ್ತು ಸಂಜೆಯ ವೇಳೆ 4.25 ಕ್ಕೆ ಹೊರಡಲಿದೆ. ಶಿವಾಜಿನಗರದಿಂದ ಬೆಳಗ್ಗೆ 8.5, 8.45,11.15 ಮಧ್ಯಾಹ್ನ 12.55, 2.5 ಮತ್ತು 3.45 ಕ್ಕೆ ಹೊರಟು ಮಂತ್ರಿ ಮಾಲ್ ಮೆಟ್ರೋ ನಿಲ್ದಾಣ ತಲುಪಲಿದೆ.

# ಮಾನವೀಯತೆ ಮೆರೆದ ಎಸ್ಪಿ!



ಚಾಮರಾಜನಗರ: ಕರ್ತವ್ಯ ನಿಮಿತ್ತ ತೆರಳುವಾಗ ವಾಹನಗಳ ನಡುವೆ ಅಪಘಾತವಾದ ಸಂದರ್ಭದಲ್ಲಿ ಗಾಯಾಳುಗಳಿಗೆ ವಾಹನ ವ್ಯವಸ್ಥೆ ಮಾಡಿ ಆಸ್ಪತ್ರೆಗೆ ಕಳುಹಿಸಿ ಮಾನವೀಯತೆ ಮೆರೆದಿದ್ದಾರೆ.

ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟದಲ್ಲಿ "ಚಿಕ್ಕಜಾತ್ರೆ ರಥೋತ್ಸವ" ಬಂದೋಬಸ್ತ್ ಪರಿಶೀಲನೆಗೆ ತೆರಳುವಾಗ ಮಾರ್ಗ ಮಧ್ಯೆ ಸಂತೇಮರಹಳ್ಳಿ ಠಾಣಾ ಸರಹದ್ದು ಯಡಿಯೂರು ಗ್ರಾಮದ ಬಳಿ ರಸ್ತೆ ಅಪಘಾತ ನಡೆದಿತ್ತು. ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಉಪಚರಿಸಿ ಚಿಕಿತ್ಸೆ ಸಂಬಂಧ ಆಸ್ಪತ್ರೆಗೆ ದಾಖಲಿಸಲು ಕ್ರಮವಹಿಸಿ ಕಾನೂನು ಕ್ರಮ ಕೈಗೊಳ್ಳಲು ತನಿಖಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿ ತೆರಳಿದರು

# ಚಿರತೆಗಾಗಿ ಇಟ್ಟಿದ್ದ ಬೋನಿನಲ್ಲಿ ವ್ಯಕ್ತಿ ಸೆರೆ



ಚಾಮರಾಜನಗರ: ಚಿರತೆಗಾಗಿ ಇಟ್ಟಿದ್ದ ಬೋನಿಗೆ ವ್ಯಕ್ತಿ ಸೆರೆಯಾದ ವಿಚಿತ್ರ ಘಟನೆ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಪಡಗೂರು ಗ್ರಾಮದಲ್ಲಿ ನಡೆದಿದೆ. ಪಡಗೂರು ಗ್ರಾಮದ ಹನುಮಯ್ಯ ಎಂಬಾತ ಬೋನಿನಲ್ಲಿ ಸೆರೆಯಾಗಿದ್ದ ವ್ಯಕ್ತಿ. ಜಾನುವಾರುಗಳ ಮೇಲೆ ಚಿರತೆಯೊಂದು

ನಿರಂತರ ದಾಳಿ ಮಾಡುತ್ತಿದ್ದ ಹಿನ್ನೆಲೆ ಅರಣ್ಯ ಇಲಾಖೆಯು ಮಹಾದೇವಸ್ವಾಮಿ ಎಂಬವರ ಜಮೀನಿನಲ್ಲಿ ತುಮಕೂರು ಮಾದರಿ ಬೋನನ್ನು ಅಳವಡಿಸಿ ಕರು ಕಟ್ಟಿದ್ದರು. ಹನುಮಯ್ಯ ಚಿರತೆಗಾಗಿ ಇಟ್ಟಿದ್ದ ಬೋನಿನ ಒಳಕ್ಕೆ ಹೋಗಿದ್ದಾಗ ಬಾಗಿಲು ಬಂದ್ ಆಗಿ 5 – 6 ತಾಸು ಬೋನೊಳಗೆ ಸಮಯ ಕಳೆದಿದ್ದಾರೆ. ಸ್ಥಳೀಯ ರೈತರೊಬ್ಬರು ಬೋನಿನೊಳಗೆ ವ್ಯಕ್ತಿ ಸೆರೆಯಾಗಿದ್ದನ್ನ ಕಂಡು ಹೌಹಾರಿ, ಸ್ಥಳೀಯರಿಗೆ ಹಾಗೂ ಅರಣ್ಯ ಇಲಾಖೆಗೆ ಮಾಹಿತಿ ಕೊಟ್ಟಿದ್ದಾರೆ.

# ದೇವಲಾಪುರ ಕರ್ನಾಟಕ ಪಬ್ಲಿಕ್ ಸ್ಕೂಲ್, ಸಿರಿ ಸಂಭ್ರಮದ ಸಿದ್ಧತೆ



**ನಾಗಮಂಗಲ:** ನಾಗಮಂಗಲ ತಾಲೂಕಿನ ದೇವಲಾಪುರ ಹೋಬಳಿ ಕೇಂದ್ರದಲ್ಲಿರುವ ಸರ್ಕಾರಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಶಾಲೆಯ ಸಿರಿ ಸಂಭ್ರಮ– 2025 ಕಾರ್ಯಕ್ರಮದ ಪೂರ್ವ ಸಿದ್ಧತೆ ನಡೆಯುತ್ತಿದೆ.

ಸರಕಾರಿ ಶಾಲೆಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಸಿರಿ ಸಂಭ್ರಮ ಜನವರಿ 18ರಂದು ಮಕ್ಕಳ ಕಲಾ ವೈಭವದ ಪ್ರದರ್ಶನ ನೀಡಲು ವಿಶೇಷ ವೇದಿಕೆ ನಿರ್ಮಾಣ ವಿದ್ಯಾರ್ಥಿಗಳ ಪೋಷಕರು ಮಕ್ಕಳ ಸಾಂಸ್ಕೃತಿಕ ಹೆಜ್ಜೆ ಪರದೆಯ ವೀಕ್ಷಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಸಿರಿ ಸಂಭ್ರಮ ಶಾಲಾ ವಾರ್ಷಿಕೋತ್ಸವದ ಹೆಜ್ಜೆಗೆ ಪೂರ್ವ ಪ್ರಾಥಮಿಕ ಮಕ್ಕಳಿಂದ ಪ್ರೌಢಶಾಲಾ ಮಕ್ಕಳ ಹಂತದವರಿಗೂ ಕಾರ್ಯಕ್ರಮದ ವಿಶೇಷ ರಂಜನೆ ಆಯೋಜನೆ ಮಾಡಲಾಗಿದೆ. ಈ ಸಿರಿ ಸಂಭ್ರಮ ಕಾರ್ಯಕ್ರಮಕ್ಕೆ ಈ ಶಾಲೆಯ ಹಿರಿಯ ವಿದ್ಯಾರ್ಥಿ ಸಂಘದ ಸಹಕಾರ ಶಾಲಾ ಆಡಳಿತ ಮಂಡಳಿ ಹಾಗೂ ಶಾಲೆಯ ಶಿಕ್ಷಕರುಗಳು ತಮ್ಮ ವಿಶೇಷ ಆಸಕ್ತಿ ವಹಿಸಿ ನಡೆಸುತ್ತಿರುವುದು ಶಿಕ್ಷಕರ ಸೇವಾ ಮನೋಭಾವನೆ ಸಂಕೇತವಾಗಿದೆ.

# ಅತ್ಯಾಧುನಿಕ ಬೃಹತ್ ಜಿಮ್‌ಗೆ ಚಾಲನೆ




**ಬೆಂಗಳೂರು :** ರಾಜ್ಯದ ರಾಜಧಾನಿಯಲ್ಲಿ ಬೃಹತ್ ಹಾಗೂ ಆಧುನಿಕ ತಂತ್ರಜ್ಞಾನದ ಜಿಮ್ ಉದ್ಘಾಟನೆ ಆಗಿದೆ.

ಬಾಲಿವುಡ್ ನಟ ಸೋನು ಸೂದ್ ಹಾಗೂ ಸ್ಯಾಂಡಲ್ ವುಡ್ ಸ್ಟಾರ್ ದೃವ ಸರ್ಜಾ ಈ ಜಿಮ್ ಗೆ ಚಾಲನೆ ನೀಡಿದರು. ಒಂದು ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಬೆಂಗಳೂರು ನಗರದ ಜಿಮ್ ಪ್ರಿಯರ ಬೇಡಿಕೆಗೆ ತಕ್ಕಂತೆ ಆಧುನಿಕ ಸೌಲಭ್ಯಗಳನ್ನು ಈ ಜಿಮ್ ನಲ್ಲಿ ಕಲ್ಪಿಸಲಾಗಿದೆ.

'ವೈ ಎಫ್ ಸಿ ಜಿಮ್ ' ತನ್ನ ಗುಣಮಟ್ಟದ ಸೇವೆಯಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳದೆ, ವೈಜ್ಞಾನಿಕ ಜಿಮ್ ಉಪಕರಣಗಳು ಹಾಗೂ ತರಬೇತಿ ನೀಡುತ್ತಿದೆ. ಬೆಂಗಳೂರಿನ ಸಹಕಾರ ನಗರದಲ್ಲಿ ಈ ಜಿಮ್ ಉದ್ಘಾಟನೆ ಆಯಿತು.

30,000 ಚದರ ಅಡಿಗಳಿಗಿಂತ ಹೆಚ್ಚಿರುವ ಈ ಪ್ರೀಮಿಯಮ್ ತರಬೇತಿ ಕೇಂದ್ರವು ಕರ್ನಾಟಕದ ಅತಿದೊಡ್ಡ ಯು ಎಫ್ ಸಿ ಜಿಮ್ ಆಗಿದೆ. ಕಿಕ್ಕಿರಿದು ತುಂಬಿದ್ದ ಅಭಿಮಾನಿಗಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ಬಾಲಿವುಡ್ ನಟ ಸೋನು ಸೂದ್ ಹಾಗೂ ಸ್ಯಾಂಡಲ್ ವುಡ್ ಸ್ಟಾರ್ ದೃವ ಸರ್ಜಾ ಟೇಪ್ ಕತ್ತರಿಸುವ ಹಾಗೂ ಸಾಂಕೇತಿಕವಾಗಿ ಜಿಮ್ ಮಾಡುವ ಮೂಲಕ ಉದ್ಘಾಟನೆ ನೆರವೇರಿಸಿದರು. ಯು ಎಫ್‌ಸಿ ಶೈಲಿಯ ಅಕ್ಟಾಗನ್, ಬಾಕ್ಸಿಂಗ್ ಬ್ಯಾಗ್ ರ್ಯಾಕ್, ಮತ್ತು ಪ್ರೀಮಿಯಮ್ ಉಪಕರಣಗಳು ಈ ಜಿಮ್‌ನ ಆಕರ್ಷಣೆ ಆಗಿವೆ. ಅಭ್ಯಾಸಕ್ಕಾಗಿ ಎಲ್ಲಾ ವಯಸ್ಸಿನವರಿಗೂ ಸೂಕ್ತವಾದ ತರಬೇತಿ ನೀಡಲು ಸೂಕ್ತ ತರಬೇತುದಾರರನ್ನು ನೇಮಕ ಮಾಡಲಾಗಿದೆ.

ಪುರುಷ ಮತ್ತು ಮಹಿಳೆಯರಿಗೆ ಜಿಮ್ ಸೇವೆ ಲಭ್ಯವಿದೆ. ಫಂಕ್ಷನಲ್ ಫಿಟ್ನೆಸ್, ಕಾರ್ಡಿಯೋ ತರಬೇತಿ, ಜೊತೆಗೆ ಯೋಗ, ಜುಂಬಾ, ಸ್ಪಿನ್ನಿಂಗ್ ತರಗತಿಗಳನ್ನು ಒಳಗೊಂಡಿದೆ. ಸ್ಟೀಮ , ಸ್ಪಾ ಸೇವೆಗಳು, ವೇಲೇಟ್ ಪಾರ್ಕಿಂಗ್ ಮತ್ತು 'ಆರ್ಮ್ ಬಾರ್' ಎಂಬ ಒಳಗೃಹ ಕಫೆ ಕೂಡ ಇಲ್ಲಿ ಇವೆ.ಈ ಪ್ರೀಮಿಯಮ್ ತರಬೇತಿ ಕೇಂದ್ರವು ಬೆಂಗಳೂರಿನ ಫಿಟ್ನೆಸ್ ಉತ್ಸಾಹಿಗಳನ್ನು ಮತ್ತಷ್ಟು ಉತ್ಸಾಹಭರಿತರಾಗಿಸಲು ಹೊಸ ಅವಕಾಶವನ್ನು ಒದಗಿಸುತ್ತಿದೆ.

# ಆಪ್ ಸರ್ಕಾರಕ್ಕೆ ಕೋರ್ಟ್ ತರಾಟೆ




**ನವದೆಹಲಿ:** ಕಂಟ್ರೋಲರ್ ಮತ್ತು ಆಡಿಟರ್ ಜನರಲ್ –ಸಿಎಜಿ ವರದಿ ಮಂಡನೆ ವಿಳಂಬಗೊಳಿಸಿದ ದೆಹಲಿ ಸರ್ಕಾರದ ಕ್ರಮವನ್ನು ಉಚ್ಚ ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿದೆ.

ಸಿಎಜಿ ವರದಿ ನಿಭಾಯಿಸುವ ಬಗ್ಗೆ ದೆಹಲಿ ಹೈಕೋರ್ಟ್ ಆಮ್ ಆದ್ಮಿ ಪಕ್ಷ ನೇತೃತ್ವದ ದೆಹಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದು ನಿಮ್ಮ ಕಾಲು ನೀವೇ ಎಳೆದುಕೊಂಡಿದ್ದೀರಿ ಎಂದು ಹೇಳಿದೆ.

"ನೀವು ನಿಮ್ಮ ಪಾದಗಳನ್ನು ಎಳೆದಿರುವ ರೀತಿ ನಿಮ್ಮ ಪ್ರಾಮಾಣಿಕ ನಂಬಿಕೆಗಳ ಬಗ್ಗೆ ಅನುಮಾನ ಹುಟ್ಟುಹಾಕುತ್ತದೆ. ನೀವು ತ್ವರಿತವಾಗಿ ವರದಿಗಳನ್ನು ಸ್ಪೀಕರ್‌ಗೆ ರವಾನಿಸಬೇಕು ಮತ್ತು ಸದನದಲ್ಲಿ ಚರ್ಚೆಯನ್ನು ಪ್ರಾರಂಭಿಸಬೇಕು" ಎಂದು ನ್ಯಾಯಾಲಯ ಹೇಳಿದೆ." ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ಅನುಮಾನಗಳನ್ನು" ಹುಟ್ಟುಹಾಕಿದೆ ಎಂದು ತರಾಟೆಗೆ ತೆಗೆದುಕೊಂಡಿದೆ.

# ಕೆಪಿಎಸ್ಸಿ ವಿಚಾರದಲ್ಲಿ ಹುಡುಗಾಟಿಕೆ ಬೇಡ

### ಮೊದಲ ಪುಟದಿಂದ

ಮೋರ್ಚಾ ರಾಜ್ಯಾಧ್ಯಕ್ಷ ಮತ್ತು ಶಾಸಕ ಧೀರಜ್ ಮುನಿರಾಜು, ಜಿಲ್ಲಾ ಅಧ್ಯಕ್ಷ ಸಪ್ತಗಿರಿ ಗೌಡ ಮೊದಲಾದ ಮುಖಂಡರು ಇಲ್ಲಿಗೆ ಬಂದಿದ್ದು, ಹೋರಾಟಕ್ಕೆ ಬೆಂಬಲ ನೀಡಿದ್ದೇವೆ ಎಂದು ತಿಳಿಸಿದರು. ಈ ಬೆಂಬಲ ಸಾಂಕೇತಿಕವಲ್ಲ; ರಾಜ್ಯ ಸರಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

**ಜಾತಿ ಜನಗಣತಿ ಪಗಡೆ ಆಟವಾಗಿ ಪರಿಗಣಿಸಿದ ಸಿಎಂ**

ಜಾತಿ ಜನಗಣತಿಯನ್ನು ಮುಖ್ಯಮಂತ್ರಿಯವರು ಪಗಡೆ ಆಟ ಎಂದು ಪರಿಗಣಿಸಿದಂತಿದೆ. ಯಾವಾಗ ಅವರ ಸಿಎಂ ಕುರ್ಚಿ ಅಲ್ಲಾಡುತ್ತದೋ ಅವಾಗ ಜಾತಿ ಜನಗಣತಿಯನ್ನು ಅನುಷ್ಠಾನಕ್ಕೆ ತರುವುದಾಗಿ ಹೇಳುತ್ತಾರೆ. ಕುರ್ಚಿ ಭದ್ರವಾಗುವ ಹಾಗಿದ್ದಾಗ ಅದನ್ನು ಮುಂದೂಡುವುದಾಗಿ ಹೇಳುತ್ತಾರೆ ಎಂದು ಪ್ರಶ್ನೆಗೆ ಉತ್ತರ ನೀಡಿದರು.ಸಿದ್ದರಾಮಯ್ಯನವರ ನೇತೃತ್ವದ ರಾಜ್ಯದ ಕಾಂಗ್ರೆಸ್ ಸರಕಾರವು ಒಂದೆಡೆ ಜಾತಿಗಳ ನಡುವೆ ವಿಷಬೀಜ ಬಿತ್ತುತ್ತಿದೆ. ಜಾತಿ ಜನಗಣತಿ ವಿಚಾರದಲ್ಲಿ ಹುಚ್ಚಾಟ ಮಾಡುವುದು ಅಕ್ಷಮ್ಯ ಅಪರಾಧ ಎಂದು ಖಂಡಿಸಿದರು. ಮುಖ್ಯಮಂತ್ರಿಯ ಸ್ಥಾನದಲ್ಲಿ ಕುಳಿತವರು ಈ ರೀತಿ ಹುಡುಗಾಟಿಕೆ ಮಾಡುವುದು ಅಕ್ಷಮ್ಯ ಅಪರಾಧ ಎಂದು ನುಡಿದರು.

ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಅವರಿಗೆ ನ್ಯಾಯ ಕೊಡಿಸಬೇಕಾಗಿದೆ ಎಂದು ತಿಳಿಸಿದರು. ಕನ್ನಡ ಭಾಷೆಯನ್ನೇ ಕೊಲೆ ಮಾಡುವ ಸರಕಾರ ಇದು ಎಂದು ಟೀಕಿಸಿದರು. ಒಂದು ಸಾರಿ ಆದ ತಪ್ಪು ಮತ್ತೆ ಮರುಕಳಿಸದಂತೆ ತಿದ್ದಿಕೊಳ್ಳುವ ಯೋಗ್ಯತೆಯನ್ನೇ ಕಳೆದುಕೊಂಡಿದೆ. ಮುಖ್ಯಮಂತ್ರಿಗಳು ಯಾಕೆ ಇದರ ಕಡೆ ಗಮನ ಕೊಡುತ್ತಿಲ್ಲ ಎಂದು ಪ್ರಶ್ನಿಸಿದರು.

# ಲಾಲ್‌ಬಾಗ್‌ನಲ್ಲಿ ಇಂದಿನಿಂದ ಫಲಪುಷ್ಪ ಪ್ರದರ್ಶನ

### ಮೊದಲ ಪುಟದಿಂದ

ಮೆಟ್ರೋ ರೈಲು ನಿಲ್ದಾಣ ಸೇರಿದಂತೆ ವಿವಿಧ ಭಾಗಗಳಲ್ಲಿ ಕ್ಯೂ.ಆರ್.ಕೋಡ್ ಸ್ಟಿಕ್ಕರ್ ಅಂಟಿಸುವ ಮೂಲಕ ಟಿಕೆಟ್ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅವರು ವಿವರಿಸಿದರು.

ಮುಂಗಡ ಟಿಕೆಟ್ ಬುಕ್ ಮಾಡಲು https://hasiru.karnataka.gov.in/floweshow/login.aspx ವೆಬ್ಸೈಟ್ಗೆ ಭೇಟಿ ಕೊಡಬೇಕು. ಈ ವೆಬ್ಸೈಟ್ ಮೂಲಕ ಟಿಕೆಟ್ ಬುಕ್ ಮಾಡುವುದಕ್ಕಾಗಿ ಈ ಲಿಂಕ್ನಲ್ಲಿ ಬರುವ ಕ್ಯೂಆರ್ ಕೋಡ್ನ್ನು ಪರಿಚಯಿಸಲಾಗಿದೆ. ಈ ಕ್ಯೂರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಟಿಕೆಟ್ ಪಡೆಯಬಹುದಾಗಿದೆ. ಅದನ್ನು ದ್ವಾರದಲ್ಲಿ ತೋರಿಸಿ ಸುಲಭವಾಗಿ ಪ್ರವೇಶ ಮಾಡಬಹುದಾಗಿದೆ ಎಂದು ಅವರು ವಿವರಿಸಿದರು.

ಇಂಡೋ ಅಮೇರಿಕನ್ ಹೈ–ಬ್ರೀಡ್ ಸೀಡ್ಸ್ ಕಂಪೆನಿಯ ಆಕರ್ಷಕ ಹೂವುಗಳ ಜೋಡಣೆ ಮತ್ತು ವಾಲ್ಮೀಕಿ ಪುತ್ಥಳಿಯನ್ನು ಅನಾವರಣ ಮಾಡಲಾಗುತ್ತಿದೆ. ಅಲ್ಲದೇ ವೈವಿಧ್ಯಮಯ 1.75 ಲಕ್ಷ ಹೂವುಗಳು ಮತ್ತು ಎಲೆ ಜಾತಿಯ ಗಿಡಗಳ ಪ್ರದರ್ಶನವೂ ಇರಲಿದೆ.



ವಾಲ್ಮೀಕಿ ಎಂದರೆ ಬೃಹತ್ ಹುತ್ತವಾಗಿದೆ. ಸಂಸ್ಕೃತದಲ್ಲಿ ಹುತ್ತ ಎಂದರೆ ವಾಲ್ಮೀಕ ಎಂಬುದಾಗಿದೆ. ಇದನ್ನು ಆಕರ್ಷಣೆ ಮಾಡುವುದರ ಸಲುವಾಗಿ ಗಾಜಿನ ಮನೆಯ ಮಧ್ಯಭಾಗದಲ್ಲಿ ವಿವಿಧ ಜಾತಿಯ ಸುಮಾರು 1.5 ಲಕ್ಷ ಹೂವುಗಳಿಂದ ಬೃಹತ್ ಹುತ್ತವನ್ನು ಅನಾವರಣ ಮಾಡಲಾಗಿದ್ದು, ಇದು ಗಾಜಿನ ಮನೆಯ ಪ್ರಮುಖ ಆಕರ್ಷಣೆಯಾಗಿರಲಿದೆ.

ಗಾಜಿನ ಮನೆಯ ಎಡಬದಿಯಲ್ಲಿ ಪುಷ್ಪ ಮಾದರಿಯ ವಾಲ್ಮೀಕಿ ಆಶ್ರಮ ಮತ್ತು ರಾಮಾಯಣ ರಚನೆಗೆ ಮೂಲ ಕಾರಣವಾದ ಸನ್ನಿವೇಶದ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದಕ್ಕಾಗಿ ವಿವಿಧ ರಾಜ್ಯಗಳಿಂದ ತರಿಸಿರುವ 2.75 ಲಕ್ಷ ರೂ.ಗಳನ್ನು ಬಳಸಲಾಗುತ್ತಿದೆ.

ಗಾಜಿನ ಮನೆಯ ಕೇಂದ್ರ ಭಾಗದ ಹಿಂಬದಿಗೆ ರಾಮಾಯಣದ ಚಟುವಟಿಕೆಯನ್ನು ಬಿಂಬಿಸುವ 3ಡಿ ಕಲಾಕೃತಿ ಹಾಗೂ ರಾಮಾಯಣದ ಸಾಂದರ್ಭಿಕ ಚಿತ್ರಗಳ ಅನಾವರಣವಿರಲಿದೆ.

ಇನ್ನುಳಿದಂತೆ ಹೊರಾಂಗಣದಲ್ಲಿ ಪುಷ್ಪಗಳಿಂದ ನರ್ತಿಸುವ ರಾಷ್ಟ್ರಪಕ್ಷಿ ನವಿಲು, ಹೃದಯಾಕಾರದ ಹೂವಿನ ಕಮಾನುಗಳು, ಮೆಗಾ ಫ್ಲೋರಲ್ ಫ್ಲೋ, ತೂಗುವ ಹೂವುಗಳು, ಸಸ್ಯ ಸಂತೆ ಮತ್ತು ವಿಶೇಷಗಳು ಇರಲಿವೆ. ಅಲ್ಲದೆ, ಭದ್ರತೆಗಾಗಿ ಸಿಸಿ ಕ್ಯಾಮೆರಾಗಳು, ಪೊಲೀಸ್ ಔಟ್ ಪೋಸ್ಟ್, ಕುಡಿಯುವ ನೀರಿನ ಸೌಲಭ್ಯ ಇರಲಿದೆ.

ಪಾರ್ಕಿಂಗ್ : ಪ್ರದರ್ಶನಕ್ಕೆ ಆಗಮಿಸುವವರಿಗೆ ಶಾಂತಿ ನಗರ ಬಹುಮಹಡಿ ಕಟ್ಟ, ಹಾಪ್ ಕಾಮ್ಸ್ ಆವರಣ, ಅಲ್ ಅಮೀನ್ ಕಾಲೇಜು ಆವರಣದಲ್ಲಿ ನಿಲುಗಡೆಗೆ ವ್ಯವಸ್ಥೆ ಇರಲಿದೆ ಎಂದು ಅವರು ವಿವರಿಸಿದರು.

ಮುಖ್ಯಮಂತ್ರಿಗಳಿಂದ ಉದ್ಘಾಟನೆ : ವಾಲ್ಮೀಕಿ ವಿಷಯಾಧಾರಿತ ಪಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಬೆಳಗ್ಗೆ 10 ಗಂಟೆಗೆ ಲೋಕಾರ್ಪಣೆ ಮಾಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಸ್ಥಳೀಯ ಶಾಸಕ ಉದಯ್ ಗರುಡಾಚಾರ್ ಉಪಸ್ಥಿತರಿರಲಿದ್ದಾರೆ ಎಂದು ಡಿ.ಎಸ್.ರಮೇಶ್ ಮಾಹಿತಿ ನೀಡಿದರು.

# ನಗರಸಭೆ 4 ಕಾಂಗ್ರೆಸ್ ಸದಸ್ಯರ ಸದಸ್ಯತ್ವ ಅನರ್ಹತೆ

## ಜಿಲ್ಲಾಧಿಕಾರಿಗಳ ನ್ಯಾಯಾಲಯದಿಂದ ಮಹತ್ವದ ಆದೇಶ

**ಚಾಮರಾಜನಗರ:** ನಗರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಗೈರಾಗಿದ್ದ ಹಾಗೂ ಪಕ್ಷಾಂತರ ಮಾಡಿದ್ದ 4 ಕಾಂಗ್ರೆಸ್ ನಗರ ಸಭಾ ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಿ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಬುಧವಾರ ಆದೇಶ ಹೊರಡಿಸಿದ್ದಾರೆ.

ಚಾಮರಾಜನಗರ ನಗರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ 2024ರ ಸೆ.9 ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯರಿಗೆ ಪಕ್ಷದ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸುವಂತೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ವಿಪ್ ಜಾರಿ ಮಾಡಿದ್ದರು. ಆದರೆ ಕಾಂಗ್ರೆಸ್ ಸದಸ್ಯರಾದ ಎಸ್ .ನೀಲಮ್ಮ, ಭಾಗ್ಯಾ, ಆರ್.ಪಿ.ನಂಜುಂಡಸ್ವಾಮಿ ವಿಪ್ ಉಲ್ಲಂಘಿಸಿ ಚುನಾವಣೆಗೆ ಗೈರು ಹಾಜರಾಗಿದ್ದರು. ಮತ್ತೊಬ್ಬ ಕಾಂಗ್ರೆಸ್ ಸದಸ್ಯೆ ಬಿ.ಎಸ್.ಚಂದ್ರಕಲಾ ಅವರು ಬಿಜೆಪಿ ಅಭ್ಯರ್ಥಿಯ ಪರವಾಗಿ ಕೈ ಎತ್ತು ಮೂಲಕ ಮತ ಚಲಾಯಿಸಿದ್ದರು.

ಇದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ. ಮರಿಸ್ವಾಮಿ ಮತ್ತು ನಗರಸಭಾ ಕಾಂಗ್ರೆಸ್ ಸದಸ್ಯ ಆರ್.ಎಂ. ರಾಜಪ್ಪ ಅವರು ವಿಪ್ ಉಲ್ಲಂಘನೆ ಮಾಡಿದ 4 ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಬೇಕು ಎಂದು ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮದ ಅಡಿಯಲ್ಲಿ ದೂರು ಸಲ್ಲಿಸಿದ್ದರು.

ಈ ಸಂಬಂಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಾದ– ವಿವಾದ ಆಲಿಸಿದ ಜಿಲ್ಲಾ ದಂಡಾಧಿಕಾರಿಯಾಗಿರುವ ಶಿಲ್ಪಾ ನಾಗ್ ಕಾಂಗ್ರೆಸ್ ಪಕ್ಷದ 4 ಸದಸ್ಯರು ಉದ್ದೇಶಪೂರ್ವಕ ವಾಗಿ ಪಕ್ಷದ ವಿರುದ್ಧ ಮತ ಚಲಾಯಿಸಿರುವುದು ಹಾಗೂ ಗೈರುಹಾಜರಾಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಿ ಆದೇಶ ಹೊರಡಿಸಿದರು.






ಪಕ್ಷ ವಿರೋಧಿ ಚಟುವಟಿಕೆ ಮಾಡಿದವರಿಗೆ ತಕ್ಕ ಶಿಕ್ಷೆಯಾಗಿದೆ. ಜಿಲ್ಲಾಧಿಕಾರಿಗಳ ನ್ಯಾಯಾಲಯ ಉತ್ತಮ ನಿರ್ಧಾರವನ್ನು ತೆಗೆದುಕೊಂಡಿದೆ. ಮುಂದಿನ ದಿನಗಳಲ್ಲಿ ಪಕ್ಷಕ್ಕೆ ದ್ರೋಹ ಮಾಡುವವರಿಗೆ ಹಾಗೂ ಪಕ್ಷಾಂತರ ಮಾಡುವವರಿಗೆ ಇದು ದೊಡ್ಡ ಪಾಠವಾಗಿದೆ.

**ಪಿ.ಮರಿಸ್ವಾಮಿ** | ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

ನಗರ ಸಭೆ ವರಿಷ್ಠರ ಚುನಾವಣೆಯ ಸಂದರ್ಭದಲ್ಲಿ ಉತ್ತರ ಭಾರತದಪ್ರವಾಸ ನಿಗದಿಯಾಗಿದ್ದರಿಂದ ನಾನು ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಗಿರಲಿಲ್ಲ. ನಾವು ಇಲ್ಲದ ಸಮಯದಲ್ಲಿ ಪಕ್ಷದವರು ವಿಪ್ ಜಾರಿ ಮಾಡಿದ್ದಾರೆ. ಮುಂದಿನ ನಗಳಲ್ಲಿ ಕಾನೂನು ಹೋರಾಟ ಮಾಡುತ್ತೇನೆ.

**ಆರ್.ಪಿ.ನಂಜುಂಡಸ್ವಾಮಿ**

| ಅನರ್ಹ ಗೊಂಡಿರುವ ನಗರಸಭೆ ಸದಸ್ಯ

# ಅಂತರ್ಜಾತಿ ವಿವಾಹಕ್ಕೆ ಹೆಚ್ಚಿನ ಆದ್ಯತೆ

**ಶಿಡ್ಲಘಟ್ಟ:** ಜಾತಿ ವ್ಯವಸ್ಥೆ ವಿರುದ್ಧ ಪ್ರಮುಖವಾಗಿ ಹೋರಾಟ ಮಾಡಿದವರು ಅಂತರ್ಜಾತಿ ವಿವಾಹಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಸಮಾಜ ಸುಧಾರಣೆ ಮತ್ತು ಬದಲಾವಣೆಗಾಗಿ 68 ಸಾವಿರ ವಚನಗಳನ್ನು ರಚನೆ ಮಾಡಿ, ಶಿವಯೋಗಿ ಸಿದ್ದರಾಮ ಅವರು ವಚನ ಕ್ರಾಂತಿ ಮಾಡಿದ್ದರು ಎಂದು ಶಾಸಕರಾದ ಬಿ.ಎನ್.ರವಿಕುಮಾರ್ ತಿಳಿಸಿದರು.

ನಗರದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಶಿವಯೋಗಿ ಸಿದ್ದರಾಮ ಜಯಂತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಇವರ ಸಮಾಜಮುಖಿ ಬದುಕು ಯೌವ್ವನದಲ್ಲೇ ಪ್ರಾರಂಭವಾಗುತ್ತದೆ ಸಿದ್ದರಾಮೇಶ್ವರರು ಸೊಲ್ಲಾಪುರದಲ್ಲಿ ಕೆರೆಯನ್ನು ಕಟ್ಟಿಸಿ, ಛತ್ರಗಳನ್ನು ಕಟ್ಟಿಸಿ, ಅನ್ನದಾನ ಮಾಡುತ್ತಾ ಜನರ ಕಂದಾಚಾರ ಮೌಢ್ಯಗಳನ್ನು ಪರಿಹರಿಸುತ್ತಾ ಅವರನ್ನು ಉದ್ಧರಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ ಸಮುದಾಯದವರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಹೇಳಿದರು.

ತಹಶೀಲ್ದಾರ್ ಬಿ.ಎನ್.ಸ್ವಾಮಿ ಮಾತನಾಡಿ, ಸಮಾಜದ ಎಲ್ಲಾ ವರ್ಗಗಳ ಜನರು ಸಿದ್ದರಾಮೇಶ್ವರರ ಜೀವನ ವಿವರಗಳನ್ನು ತಿಳಿಯುವುದರಿಂದ, ಅವರ ವಚನಗಳನ್ನು ಅಧ್ಯಯನ ಮಾಡುವುದರಿಂದ ಅಪಾರವಾದ, ಪ್ರಯೋಜನವಿದೆ ನೊಳಂಬ ವೀರಶೈವ ಸಮಾಜವು ಅವರ ಆಗಮನನ್ನು ಗುರುಸ್ಥಾನದಲ್ಲಿಟ್ಟು ಪೂಜಿಸುತ್ತಿದೆ ಅದು ಸಿದ್ಧರಾಮೇಶ್ವರರನ್ನು ಆರಾಧನಾಭಾವದಿಂದ ಕಂಡು ಗೌರವಿಸುತ್ತಿರುವುದು ರೂಢಿಯಲ್ಲಿದೆ ಹನ್ನೆರಡನೇ ಶತಮಾನಕ್ಕಿಂತ ಮುಂಚೆ ಆಳ್ವಿಕೆಯಲ್ಲಿದ್ದ ನೊಳಂಬ ರಾಜರು ಸಿದ್ಧರಾಮೇಶ್ವರರನ್ನು ಗುರುವೆಂದು ಸ್ವೀಕರಿಸಿದವರು ಇಂದಿಗೂ ಆ ಸಂಪ್ರದಾಯವನ್ನು ಮುಂದುವರಿಸಿದ್ದಾರೆ ಅವರಲ್ಲಿದ್ದ ಆದರ್ಶಗಳು ಯುವಪೀಳಿಗೆಗೆ ಮಾದರಿಯಾಗಬೇಕು ಎಂದರು.

ಇದೇ ವೇಳೆ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಭೋವಿ ಸಂಘದ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್, ತಾಲ್ಲೂಕು ಗೌರವಾಧ್ಯಕ್ಷ ಚಲಪತಿ, ಉಪಾಧ್ಯಕ್ಷ ರಾಜಪ್ಪ, ನಗರಸಭೆ ಸದಸ್ಯ ಸುರೇಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಂಕ್ ಮುನಿಯಪ್ಪ, ತಾಲ್ಲೂಕು ಆರೋಗ್ಯಾಧಿಕಾರಿ ವೆಂಕಟೇಶಮೂರ್ತಿ, ಇನ್ನಿತರರಿದ್ದರು.




# ಮಕ್ಕಳಿಗೆ ವಿದ್ಯೆ ಸುಗ್ಗಿ ಸಂಕಲ್ಪಕ್ಕೆ ಶಾಲೆ ದತ್ತು: ಅಪ್ಪಾಜಿ ಗೌಡ

**ದೇವಲಾಪುರ:** ಸಂಕ್ರಾಂತಿ ಸಂಭ್ರಮ ಸುಗ್ಗಿ ಹುಗ್ಗಿಯ ಕಾರ್ಯಕ್ರಮದಲ್ಲಿ ರೈತರ ಸುಗ್ಗಿಯ ಜೊತೆಯಲ್ಲಿ ಮಕ್ಕಳ ವಿದ್ಯೆಯ ಸುಗ್ಗಿ ಆಗಬೇಕೆಂಬ ಆಸೆಯೊಂದಿಗೆ ದೇವಲಾಪುರ ಶಾಲೆ ದತ್ತು ತೆಗೆದುಕೊಳ್ಳುವುದಾಗಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಅಪ್ಪಾಜಿಗೌಡ ರವರು ಮಾತನಾಡಿದರು.

ಅವರು ನಾಗಮಂಗಲ ತಾಲೂಕು ದೇವಲಾಪುರ ಗ್ರಾಮದಲ್ಲಿ ಸಂಕ್ರಾಂತಿ ಸಂಭ್ರಮದ ಸಮಾರಂಭದಲ್ಲಿ ಸಚಿವರು ದತ್ತು ತೆಗೆದುಕೊಳ್ಳುವ ಪ್ರಕ್ರಿಯೆ ಒಪ್ಪಿಗೆ ಸೂಚಿಸುವ ಮುಖಾಂತರ ವಿದ್ಯೆ ಸುಗ್ಗಿಯ ಮಕರ ಸಂಕ್ರಾಂತಿಯ ವಿದ್ಯೆ ಸಂಕ್ರಮಣಕ್ಕೆ ಚಾಲನೆ ದೊರೆತಂತಾಗಿದೆ.



ಇದೇ ಸಂದರ್ಭದಲ್ಲಿ ಮಾಜಿ ವಿಧಾನ ಪರಿ?ತ್ ಸದಸ್ಯರಾದ ಅಪ್ಪಾಜಿಗೌಡ ರವರು ಮೈಸೂರು ವಿಶ್ವವಿದ್ಯಾನಿಲಯ ಸನ್ನೆಟ್ ಸದಸ್ಯರಾಗಿದ್ದ ಸಂದರ್ಭದಲ್ಲಿ ಅವರು ದೇವಲಾಪುರ ಶಾಲಾ ಕೊಟ್ಟಿರುವ ಮಂಜೂರು ಮಾಡಿಸಿದ್ದು ಇದೆ ಈ ಸಮಾರಂಭ ದಲ್ಲಿ ಶಾಲಾ ಕಟ್ಟಡವನ್ನ ಸಚಿವರು ಲೋಕಾರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಕುಮಾರ್ ಮಂಡ್ಯ ಕ್ಷೇತ್ರದ ಶಾಸಕರಾದ ಗಣಿಗ ರವಿಕುಮಾರ್ ವಿಧಾನ ಪರಿ?ತ್ ಸದಸ್ಯರಾದ ದಿನೇಶ್ ಗೂಳಿಗೌಡ ಮಾಜಿ ವಿಧಾನ ಪರಿ?ತ್ ಸದಸ್ಯರಾದ ಅಪ್ಪಾಜಿಗೌಡ ಸ್ಟಾರ್ ಚಂದ್ರು ರವರು ಹಾಗೂ ಇಲಾಖೆ ಅಧಿಕಾರಿಗಳು ಹಾಜರಿದ್ದರು

# ಶಾಸಕರ ದಮ್ಕಿಗಳಿಗೆ ನಾವು ಯಾರು ಹೆದರುವುದ್ದಿಲ್ಲ

**ಮಾಲೂರು:** ತಾಲ್ಲೂಕಿನಲ್ಲಿ ಮುಂದೆ ನಡೆಯಲಿರುವ ಚುನಾವಣೆಗಳನ್ನು ಮಾಜಿ ಶಾಸಕ ಕೆ.ಎಸ್ ಮಂಜುನಾಥ್ ಗೌಡರ ನೇತೃತ್ವದಲ್ಲಿ ಎದುರಿಸಲು ಸಿದ್ಧರಿದ್ದು ಸ್ಥಳಿಯ ಶಾಸಕರ ದಮ್ಕಿಗಳಿಗೆ ನಾವು ಯಾರು ಹೆದರುವುದ್ದಿಲ್ಲ ಸ್ಥಳೀಯ ಶಾಸಕರು ಭ್ರಮೆಯಲ್ಲಿದ್ದಾರೆ ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಟಿ ಬಿ ಕೃ?ಪ್ಪ ಶಾಸಕ ಕೆ ವೈ ನಂಜೇಗೌಡರಿಗೆ ತಿರುಗೇಟು ನೀಡಿದರು, ಪಟ್ಟಣದ ಜಿ.ಪಂ.ಮಾಜಿ ಸದಸ್ಯ ಚೆನ್ನಸ್ವಾಮಿಗೌಡ ಅವರ ನಿವಾಸದಲ್ಲಿ ತಾಲ್ಲೂಕು ಬಿಜೆಪಿ ವತಿಯಿಂದ ಪಿ.ಎಲ್.ಡಿ ಬ್ಯಾಂಕ್ ಚುನಾವಣೆಯಲ್ಲಿ ಗೆದ್ದಿರುವ ಬಿಜೆಪಿ ಪಕ್ಷದ ನೂತನ ನಿರ್ದೇಶಕರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಅಭಿನಂದಿಸಿ ಮಾತನಾಡಿದರು.

ಪಿ ಎಲ್ ಡಿ ಬ್ಯಾಂಕ್ ನಲ್ಲಿ ಗೆಲ್ಲುವಂತ ಅಭ್ಯರ್ಥಿಗಳನ್ನ ಸ್ಥಳಿಯ ಶಾಸಕರು ಹೆದರಿಸಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿ ಚುನಾವಣೆ ಮಾಡಿದ್ದಾರೆ ಪಿ ಎಲ್ ಡಿ ಬ್ಯಾಂಕ್ ಪಕ್ಷದ ಚಿಹ್ನೆಯಲ್ಲಿ ನಡೆಯುವಂತ ಚುನಾವಣೆಯಲ್ಲ ರೈತರ ಪರವಾಗಿ ನಡೆಯುವ ಚುನಾವಣೆಯಾಗಿದೆ ಆದರೆ ಇಲ್ಲಿ ಸಂಪೂರ್ಣ ಕಾಂಗ್ರೆಸ್ ಪಕ್ಷ ರಾಜಕೀಯವಾಗಿ ಪರಿವರ್ತನೆ ಮಾಡಿ ಬಿಜೆಪಿ ಅಭ್ಯರ್ಥಿಗಳನ್ನ ಮತ್ತು ಮತದಾರರನ್ನ ಹೆದರಿಸುವ ಮುಖಾಂತರ ಚುನಾವಣೆ ನಡೆಸಿರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಪಕ್ಷದ ಮುಖಂಡರು ಅಭಿಪ್ರಾಯವಾಗಿದೆ,

ಅಲ್ಲದೆ ಸ್ಥಳಿಯ ಶಾಸಕರು ಪಕ್ಷದ ಮುಖಂಡರು ಇಂತಹ ಪ್ರವೃತಿಯನ್ನು ಬಿಟ್ಟು ಮುಂದೆ ನಡೆಯುವ ರೈತರ ಸಹಕಾರ ಸಂಘಗಳ ಚುನಾವಣೆಗಳನ್ನು ಆ ಭಾಗದ ರೈತರಿಗೆ ಮುಖಂಡರಿಗೆ ಜವಾಬ್ದಾರಿ ನೀಡಿದರೆ ಜಾತ್ಯಾತೀತವಾಗಿ ಪಕ್ಷತಿತ್ತವಾಗಿ ನಿರ್ಭಿತಿಯಿಂದ ಚುನಾವಣೆ ಗಳನ್ನು ಅರ್ಹರಿಗೆ ಆದ್ಯತೆ ನೀಡುವ ಮೂಲಕ ಡಿಸಿಸಿ ಬ್ಯಾಂಕ್ ಸಹಕಾರ ಸಂಘಗಳ ಚುನಾವಣೆಗಳು ನಡೆಸಿದ್ದಾದ್ರೆ ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸಾಯಕ್ಕೆ ಹಾಗೂ ಸಾಲ ಸೌಲಭ್ಯ ಕಲ್ಪಿಸಲು ಯಾವುದೇ ರಾಜಕೀಯ ಪಕ್ಷದ ಮತ್ತು ಅಧಿಕಾರಿಯ ಹಸ್ತಕ್ಷೇಪ ಇಲ್ಲದೇ ಮುಕ್ತವಾಗಿ ವಾತಾವರಣ ನಿರ್ಮಾಣವಾಗಲಿಕೆ ಶಾಸಕರಿಗೆ ಒಳ್ಳೆಯ ಮನಸ್ಸು ನೀಡಲಿ ಎಂದು ಲೇವಡಿ ಮಾಡಿದರು,

ಇನ್ನೂ ಮುಂದೆ ಯಾವುದೇ ಚುನಾವಣೆಗಳು ಬಂದಾಗ ಮಾಜಿ ಶಾಸಕ ಕೆ ಎಸ್ ಮಂಜುನಾಥ್ ಗೌಡರ ನೇತೃತ್ವದಲ್ಲಿ ಚುನಾವಣೆ ಎದುರಿಸಲು ನಾವು ಸನ್ನತರಾಗಿದ್ದೇವೆ ಸ್ಥಳೀಯ ಶಾಸಕರ ಮುಖಂಡರ ದಮ್ಕಿಗಳಿಗೆ ಹೆದರುವಂತವರು ಬಿಜೆಪಿ ಪಕ್ಷದಲ್ಲಿ ಯಾರು ಇಲ್ಲ ಅಂತಹ ಸ್ಥಿತಿಯಲ್ಲಿ ಶಾಸಕರು ನೋಡಿದರೆ ಭಯ ಪಡುವ ಸ್ಥಿತಿಯಲ್ಲಿ ಇಲ್ಲ ಅದು ಅವರ ಭ್ರಮೆ ಎಂದು ಶಾಸಕ ಕೆ ವೈ ನಂಜೇಗೌಡ ವಿರುದ್ಧ ಬಿಜೆಪಿ ತಾಲ್ಲೂಕು ಅಧ್ಯಕ್ಷ ಟಿ ಬಿ ಕೃ?ಪ್ಪ ವಾಗ್ದಾಳಿ ನಡೆಸಿದರು,

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಚಿನ್ನಸ್ವಾಮಿಗೌಡ, ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕರಾದ ಕೆ.ಬಿ.ನಾರಾಯಣಸ್ವಾಮಿ, ದಯಾನಂದ್,ತೇಜಸ್ ಗೌಡ, ಬಿಜೆಪಿ ಮಹಿಳಾ ಅಧ್ಯಕ್ಷೆ ಪದ್ಮಾವತಿ, ಪುರಸಭಾ ಸದಸ್ಯೆ ಅನಿತಾ ನಾಗರಾಜ್, ಬನಹಳ್ಳಿ ಮುನಿಸ್ವಾಮಿಗೌಡ, ಮಂಜುನಾಥ್, ಎಂ.ಪಿ.ಚಂದ್ರಶೇಖರ್ ಗೌಡ,ಒಜೋರಹಳ್ಳಿ ಮುನಿಯಪ್ಪ, ಬೆಳ್ಳಾವಿಸೋಮಣ್ಣ, ಆಂಚೆಮುಸ್ಕೂರು ಬಾಬು, ಕೆ.ಎನ್.ಜಗದೀಶ್, ದೊಡ್ಡಿರಾಜಪ್ಪ, ಮಹೇಶ್, ಶ್ರೀನಿವಾಸ್ ಕಿರಣ್, ಕೊಮ್ಮನಹಳ್ಳಿ ಕೃಷ್ಣಪ್ಪ ಸೇರಿದಂತೆ ಹಲವಾರು ಹಾಜರಿದ್ದರು.

# ಪಿ.ಎಲ್.ಡಿ ಬ್ಯಾಂಕ್ ಷೇರುದಾರರಿಗೆ ಲಾಭಾಂಶ ಬೋನಸ್ ಚೆಕ್ ವಿತರಣೆ

**ಚಿಕ್ಕಬಳ್ಳಾಪುರ:** ನಗರದ ಪಿ.ಎಲ್.ಡಿ ಬ್ಯಾಂಕ್ ನಲ್ಲಿಂದು ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಬ್ಯಾಂಕ್ ನ ಷೇರುದಾರರಾದ ರೈತರಿಗೆ ಡೆವಿಡೆಂಟ್(ಲಾಭಾಂಶ) ಚೆಕ್ ವಿತರಣೆಯನ್ನು ಬ್ಯಾಂಕ್ ಅಧ್ಯಕ್ಷರಾದ ಗಂಗರೇಕಾಲುವೆ ಪ್ರಸಾದ್ ನೇತೃತ್ವದಲ್ಲಿ ವಿತರಿಸಲಾಯಿತು.


ಈ ವೇಳೆ ಮಾತನಾಡಿದ ಅಧ್ಯಕ್ಷ ಪ್ರಸಾದ ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್‌ನ 2023–24ನೇ ಸಾಲಿನಲ್ಲಿ ಬಂದ 80 ಲಕ್ಷ ಲಾಬಾಂಶದಲ್ಲಿ ಶೇಖಡಾ 10ರ?ಟ್ಟು ಹಣ ಷೇರುದಾರರಿಗೆ ಬೋನಸ್ ರೂಪದಲ್ಲಿ ಹಂಚಿಕೆ ಮಾಡಲಾಗಿದೆ. ಒಟ್ಟು 4867 ಸುಸ್ತೀದಾರರು, ಸುಸ್ತಿದಾರರಲ್ಲದ ಷೇರುದಾರಿಗೂ ಬೋನಸ್ ನೀಡಲಾಗಿದೆ ಎಂದು ಹೇಳಿದರು.

ಎಲ್ಲ ಮೂಲಗಳಿಂದ 80 ಲಕ್ಷ ಲಾಭ ಪಡೆದಿದ್ದು ಬಂದ ಲಾಭದಲ್ಲಿ ಶೇಖಡ ಹತ್ತರ?ಟ್ಟು ಅಂದರೆ 1861265 ರೂಗಳನ್ನ ಷೇರುದಾರರಿಗೆ ಹಂಚಿಕೆ ಮಾಡಲಾಗಿದೆ. ಹೆಚ್ಚು ಬೋನಸ್ ಪಡೆದ ಒಟ್ಟು 639 ಜನರಿಗೆ ಚೆಕ್ ರೂಪದಲ್ಲಿ ಇಂದು ವಿತರಿಸಲಾಗಿದ್ದು ಕಡಿಮೆ ಮೊತ್ತದ ಷೇರುದಾರರಿಗೆ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ ಎಂದರು.

ನಾಲ್ಕು ಕೋಟಿ ಗಳಷ್ಟು ಸಾಲವನ್ನು ನೀಡಿದ್ದು ಬ್ಯಾಂಕ್ ಗೆ ಬರುವ ಆದಾಯದಲ್ಲಿ ಕನಿಷ್ಠ ಹತ್ತರ?ಟ್ಟು ಹಣ ಷೇರುದಾರರಿಗೆ ಬೋನಸ್ ಮುಖಾಂತರ ನೀಡಲು ತೀರ್ಮಾನಿಸಲಾಗಿತ್ತು, ಬ್ಯಾಂಕ್ ಸಾಲವನ್ನು ಸರಿಯಾದ ಸಮಯಕ್ಕೆ ಮರುಪಾವತಿ ಮಾಡಿದ್ದರಿಂದ ಅದರ ಪ್ರತಿಫಲ ರೈತರಿಗೆ ಇಂದು ಬೋನೋಸ್ ಬಂದಿದೆ ಹಿಂದಿನ ಸರ್ವ ಸದಸ್ಯರ ಸಭೆಯಲ್ಲಿ ರೈತರಿಗೆ ಡೆವಿಡೆಂಟ್ ಹಣ ನೀಡಲು ಚರ್ಚಿಸಲಾಗಿತ್ತು ಅದರಂತೆ ಬ್ಯಾಂಕ್‌ನ ಷೇರುದಾರರಿಗೆ 18ಲಕ್ಷ ಹಣ ಬೋನಸ್ ಚೆಕ್ ವಿತರಿಸಿದ್ದು ಕನಿ? 80ರ?ಟ್ಟು ರೈತರಿಂದ ಸಕಾಲಕ್ಕೆ ಮರುಪಾವತಿ ಬರುತ್ತಿದೆ. ಇದೇ ರೀತಿ ಸಹಕಾರ ಬ್ಯಾಂಕ್ ನೊಂದಿಗೆ ಇದ್ದಲ್ಲಿ ಅದರ ಉತ್ತಮ ಪ್ರತಿಫಲ ಮುಂದಿನ ದಿನಗಳಲ್ಲಿ ಕಾಲಕಾಲಕ್ಕೆ ದೂರೆಯಲಿದೆ ಎಂದರು.

ಹಿರಿಯ ಮುಖಂಡರಾದ ಕೆ.ವಿ. ನಾಗರಾಜ್ ಮಾತನಾಡಿ ರಾಜ್ಯದಲ್ಲಿ ಕೆಲವೇ ಕೆಲವು ಬ್ಯಾಂಕುಗಳಲ್ಲಿ ಷೇರುದಾರರಿಗೆ ಡೆವಿಡೆಂಟ್ ಹಣ ನೀಡಲಾಗುತ್ತೀದ್ದು ಚಿಕ್ಕಬಳ್ಳಾಪುರದ ಪಿ.ಎಲ್.ಡಿ ಬ್ಯಾಂಕ್ ಆಡಳಿತ ಮಂಡಳಿ ಈ ನಿಟ್ಟಿನಲ್ಲಿ ಹೊಸ ಹೆಜ್ಜೆ ಇಟ್ಟಿ ದಿಟ್ಟವಾದ ತೀರ್ಮಾನ ಮಾಡಿದ್ದು 18ಲಕ್ಷ ರೂ ವಿತರಿಸಿದ್ದು ಸಂತೋ?ಕರ ವಿ?ಯ ಆಡಳಿತ ಮಂಡಳಿಗೆ ಅಭಿನಂದನೆ, ಮುಂದಿನ ದಿನಗಳಲ್ಲಿ ಬ್ಯಾಂಕ್ ಇನ್ನ?ಟ್ಟು ಲಾಭ ಪಡೆಯುವದರಲ್ಲಿ ಸಂದೇಹವಿಲ್ಲ ಎಂದರು.ಬ್ಯಾಂಕ್ ನ ಹಿಂದಿನ ಅಧ್ಯಕ್ಷ ನಾಗೇಶ್ ರವರ ಅವದಿಯಲ್ಲಿ ಸಂಸದ ಡಾ.ಕೆ.ಸುಧಾಕರ್ ಬ್ಯಾಂಕ್ ಗೆ ಜಮೀನು ಮಂಜೂರು ಮಾಡಿಸಿದ್ದು ಸುಮಾರು ಐದುವರೆ ಕೋಟಿ ವೆಚ್ಚದಲ್ಲಿ ಬ್ಯಾಂಕ್ ಕಟ್ಟಡ ನಿರ್ಮಾಣವಾಗಿದೆ ಕಟ್ಟದಿಂದ ಬಾಡಿಗೆಯು ಬರುತ್ತಿದ್ದು ಬ್ಯಾಂಕ್ ಆದಾಯಕ್ಕೆ ಹಣ ಜಮಾಯಿಸಿದೆ ಲಾಭಾಂಶದ ಹಣದಲ್ಲಿ ಷೇರುದಾರರಿಗೆ ಡೆವಿಡೆಂಟ್ ಹಣ ನೀಡಲಾಗುತ್ತಿದ್ದು ರೈತರಿಗೆ ಬಹಳ?ಟ್ಟು ಅನುಕೂಲವಾಗಲಿದೆ ಎಂದರು.

ಮುಖಂಡರಾದ ಮರಳುಕುಂಟೆ ಕೃ?ಮೂರ್ತಿ ಮಾತನಾಡಿ ಪಿ.ಎಲ್.ಡಿ ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸಿದ ಈವರೆಗಿನ ಅಧ್ಯಕ್ಷರು ಆಡಳಿತ ಮಂಡಳಿಗೆ ಕೃತಜ್ಞತೆಗಳು ಸಲ್ಲಿಸಿ, ರೈತರು ಬ್ಯಾಂಕಿನ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಮುಂದಾಗಬೇಕಿದೆ,ನಮ್ಮ ವ್ಯವಹಾರಗಳ ಸರಿಯಾಗಿ ಇಟ್ಟುಕೊಂಡಲ್ಲಿ ಬ್ಯಾಂಕ್ ಲಾಭಾಂಶ ಪಡೆದು ಅಭಿವೃದ್ಧಿಗೆ ಸಹಕಾರಿ ಯಾಗಲಿದೆ, ಇದರಿಂದಾಗಿಯೇ ಬ್ಯಾಂಕಿನ ಆದಾಯದಲ್ಲಿ ಷೇರುದಾರರಿಗೆ ಡೆವಿಡೆಂಟ್ ನೀಡಲಾಗಿದೆ ಎಂದು ಆಡಳಿತ ಮಂಡಳಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.ಇನ್ನು ಷೇರುದಾರರಾದ ರೈತರಿಗೆ ಹಲವಾರು ವಿ?ಯಗಳ ಬಗ್ಗೆ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ವ?ಕ್ಕೆ ಎರಡು ಮೂರು ಸೆಮಿನಾರ್ ಬ್ಯಾಂಕ್ನಿಂದ ಆಯೋಜಿಸಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಬ್ಯಾಂಕ್ ನ ಮಾಜಿ ಅಧ್ಯಕ್ಷರಾದ ನಾಗೇಶ್, ಕಾಳೆ ಗೌಡ, ರಾಮಸ್ವಾಮಿ, ಮಂಜುನಾಥ್,ಆನಂದ್ ಮೂರ್ತಿ, ನಾರಾಯಣಸ್ವಾಮಿ,ತಿರುಮಳಪ್ಪ, ಮುಕ್ತ ಮುನಿಯಪ್ಪ, ಬ್ಯಾಂಕ್ ನ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ ಮತ್ತು ಇತರರು ಉಪಸ್ಥಿತರಿದ್ದರು.



# ಈಶಾ ಯೋಗ ಕೇಂದ್ರದಲ್ಲಿನ ಜಾತ್ರೆ ಸಂಪನ್ನ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಅವಲಗುರ್ಕಿ ಬಳಿಯ ಈಶಾ ಯೋಗ ಕೇಂದ್ರದಲ್ಲಿ ಮಕರ ಸಂಕ್ರಾಂತಿಯ ದಿನವಾದ ಮಂಗಳವಾರ 54 ಅಡಿ ಎತ್ತರದ ಮಹಾಶೂಲವನ್ನು (ತ್ರಿಶೂಲ) ಸದ್ಗುರು ಜಗ್ಗಿ ವಾಸುದೇವ್ ಅವರು ಅನಾವರಣಗೊಳಿಸಿದರು.

ಕಾರ್ಯಕ್ರಮದ ಅಂಗವಾಗಿ ಮಂಗಳವಾರ ಬೆಳಿಗ್ಗೆಯಿಂದಲೇ ಈಶಾ ಯೋಗ ಕೇಂದ್ರದ ಆವರಣದಲ್ಲಿ ಸಂಭ್ರಮ,ಸಡಗರ ಮನೆ ಮಾಡಿತ್ತು, ಭಕ್ತರು ಯೋಗೇಶ್ವರ ಲಿಂಗ,ವಾಗ ,ನಂದಿ ಮತ್ತು ಮಹಾಶೂಲಕ್ಕೆ ವಿಶೇ? ಅರ್ಪಣೆ ಸಲ್ಲಿಸಿದರು.

ಭಾನುವಾರದಿಂದ ಸದ್ಗುರು ಸನ್ನಿಧಿಯಲ್ಲಿ ನಡೆಯುತ್ತಿದ್ದ ಜಾತ್ರೆಯು ಸಹ ಸಂಪನ್ನವಾಯಿತು. ಸ್ಥಳೀಯ ಚಿಕ್ಕಬಳ್ಳಾಪುರದ ಈಶಾ ಯೋಗ ಕೇಂದ್ರದಲ್ಲಿ ಮಕರ ಸಂಕ್ರಾಂತಿಯ ದಿನ ಅನಾವರಣಗೊಂಡ 54 ಅಡಿ ಎತ್ತರದ ಮಹಾಶೂಲ (ತ್ರಿಶೂಲ) ರೈತರು, ಕುಶಲಕರ್ಮಿಗಳು ಮತ್ತು ಕಲಾವಿದರು ಜಾತ್ರಾ ಕಾರ್ಯಕ್ರ ಮಗಳಲ್ಲಿ ಭಾಗವಹಿಸಿದ್ದರು. ಕೃಷಿ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳ ಮಳಿಗೆಗಳು, ತಿಂಡಿ ತಿನಿಸುಗಳ ಮಳಿಗೆಗಳು ದೊಡ್ಡ ಪ್ರಮಾಣದಲ್ಲಿ ತಲೆಎತ್ತಿದ್ದವು. ಸದ್ಗುರು ಗುರುಕುಲಂ ಸಂಸ್ಕೃತಿಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಆದಿಯೋಗಿ ದಿವ್ಯ ದರ್ಶನ ಮತ್ತು ದೇಸಿ ಜಾನುವಾರುಗಳ ಪ್ರದರ್ಶನ ನಡೆಯಿತು. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಇಸ್ರೋ ಮಾಜಿ ಅಧ್ಯಕ್ಷ ಕಿರಣ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರ್ಯದರ್ಶಿ ರಂದೀಪ್.ಡಿ ಮತ್ತಿತರರು ಪಾಲ್ಗೊಂಡಿದ್ದರು.

ಯೋಗ ಕೇಂದ್ರಕ್ಕೆ ಜನಸಾಗರ: ಯೋಗ ಕೇಂದ್ರದಲ್ಲಿ ನಡೆಯುತ್ತಿದ್ದ ಜಾತ್ರೆ ಮತ್ತು ಮಹಾಶೂಲ ಅನಾವರಣ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಯೋಗ ಕೇಂದ್ರಕ್ಕೆ ಸಾಗುವ ಹಾದಿಯಲ್ಲಿ ಕಾರು, ಬೈಕ್‌ಗಳ ಸಂದಣಿ ದೊಡ್ಡದಾಗಿತ್ತು. ಈಶಾ ಯೋಗ ಕೇಂದ್ರದ ಎತ್ತ ನೋಡಿದರೂ ಜನವೋ ಜನ. ಯೋಗ ಕೇಂದ್ರದ ಪ್ರಕಾರ ಮಹಾಶೂಲ ಅನಾವರಣ ಕಾರ್ಯಕ್ರಮದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಿದ್ದಾರೆ.

## ಗಾಂಜಾ ನಶೆ: ಸ್ನೇಹಿತನಿಗೆ ಇರಿತ

**ಚಿಕ್ಕಬಳ್ಳಾಪುರ:** ಗಾಂಜಾ ನಶೆಯಲ್ಲಿ ಸ್ನೇಹಿತನಿಗೆ ಚಾಕುವಿನಿಂದ ಚುಚ್ಚಿರುವ ಪ್ರಕರಣ ತಾಲ್ಲೂಕಿನ ಶ್ರೀರಾಂಪುರದಲ್ಲಿ ಮಂಗಳವಾರ ರಾತ್ರಿ ನಡೆದಿದೆ. ನವೀನ್ ಮತ್ತು ರಂಜಿತ್ ಸ್ನೇಹಿತರಾಗಿದ್ದು ಇಬ್ಬರೂ ಮದ್ಯ ಸೇವಿಸಿದ್ದಾರೆ.

ನಂತರ ನವೀನ್ ಗಾಂಜಾ ಸೇವಿಸುವಂತೆ ರಂಜಿತ್‌ನನ್ನು ಒತ್ತಾಯಿಸಿದ್ದಾನೆ. ಈ ವಿಚಾರವಾಗಿ ಇಬ್ಬರ ನಡುವೆ ಮಾತು ಬೆಳೆದಿದೆ. ನವೀನ್, ರಂಜಿತ್‌ಗೆ ಚಾಕುವಿನಿಂದ ಇರಿದು ಪರಾರಿ ಆಗಿದ್ದಾನೆ. ಚಿಕ್ಕಬಳ್ಳಾಪುರಕ್ಕೆ ಅಪಾರ ಪ್ರಮಾಣದಲ್ಲಿ ಗಾಂಜಾ ಪೂರೈಕೆ ಆಗುತ್ತಿದೆ ಎಂದು ಇತ್ತೀಚೆಗೆ ಸಂಸದ ಡಾ.ಕೆ.ಸುಧಾಕರ್ ಸಹ ಆರೋಪಿಸಿದ್ದರು. ನಗರದ ಕೆಲವು ಅಂಗಡಿಗಳಲ್ಲಿ ಗಾಂಜಾ ಬೆರೆತ ಸಿಗರೇಟ್‌ಗಳು ಮಾರಾಟವಾಗುತ್ತಿವೆ ಎನ್ನುವ ಆರೋಪಗಳು ಸಹ ಕೇಳಿ ಬರುತ್ತಿವೆ.

# ಅಮಿತ್ ಶಾ ಹೇಳಿಕೆ ಖಂಡಿಸಿ ಜ.18ರಂದು ಪ್ರತಿಭಟನೆ

ಚಾಮರಾಜನಗರ: ಡಾ.ಬಿ.ಆರ್. ಅಂಬೇಡ್ಕರ್ ಕುರಿತು ಸಂಸತ್ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿ ಪ್ರಗತಿಪರ ಮಹಿಳಾ ಸಂಘಟನೆಗಳ ವತಿಯಿಂದ ಜ.18 ರಂದು ನಗರದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಭಾರತೀಯ ಬೌದ್ಧ ಮಹಾಸಭಾದ ಜಿಲ್ಲಾ ಉಪಾಧ್ಯಕ್ಷೆ ನಾಗಶಿಲ್ಪ ಹೇಳಿದರು.

ಜ.18 ರಂದು ಬೆಳಗ್ಗೆ 10 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಿ ಂದ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಲಾಗು ವುದು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂಬೇಡ್ಕರ್ ಅವರು 50 ಸಾವಿರ ಗ್ರಂಥಗಳನ್ನು ಅಧ್ಯಯನ ಮಾಡಿ 5 ಸಾವಿರ ವರ್ಷಗಳ ಇತಿಹಾಸವನ್ನು ಶೋಧಿಸಿ 1927ರಲ್ಲಿ ಮಹಾರಾಷ್ಟ್ರದ ದಾಸೂನ್ನಲ್ಲಿ ಮಹಿಳೆಯರಿಗೆ ಮಾರಕವಾಗಿದ್ದಮನುಸ್ಮೃತಿಯನ್ನು ಸುಟ್ಟು ವಿಶ್ವಕ್ಕೆ ಮಾದರಿಯಾದ ಸಂವಿಧಾನವನ್ನು ರಚಿಸಿ ಈ ದೇಶದ ಸರ್ವಜನರ ಬದುಕಿಗೆ ಶಕ್ತಿ ಮತ್ತು ಸ್ಫೂರ್ತಿ ತುಂಬಿದ್ದಾರೆ. ಇಂತಹ ವ್ಯಕ್ತಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಅಮಿತ್ ಶಾ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯು ಭಾರತೀಯ ಬೌದ್ಧ ಮಹಾಸಭಾ ಮಹಿಳಾ ವಿಭಾಗ, ದಲಿತ ಹಕ್ಕುಗಳ ಸಮಿತಿಯ ಮಹಿಳಾ ಘಟಕ, ನಾನಾ ಮಹಿಳಾ ಸಂಘಗಳ ಒಕ್ಕೂಟ, ಎಸ್ಡಿಪಿಐ ಮಹಿಳಾ ವಿಭಾಗ, ವುಮೆನ್ಸ್ ಇಂಡಿಯಾ ಮೂವೆಂಟ್ ಸೇರಿದಂತೆ ಇತರೆ ಹಲವು ಸಂಘಟನೆಗಳ ಸಹಯೋಗದಲ್ಲಿ ನಡೆಯಲಿದ್ದು 150ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಭಾರತೀಯ ಬೌದ್ಧ ಮಹಾಸಭಾ ಮಹಿಳಾ ವಿಭಾಗದ ಕಾರ್ಯದರ್ಶಿ ಪುಷ್ಪಾ, ಮಹಿಳಾ ಸಂಘಗಳ ಒಕ್ಕೂಟದ ಅಧ್ಯಕ್ಷೆ ಎ.ನಾಗಮಣಿ, ಎಸ್ಡಿಪಿಐನ ವಹಿದಾ ಖಾನ್, ವುಮೆನ್ಸ್ ಇಂಡಿಯಾ ಮೂವೆಂಟ್ನ ಆಯಿಷಾ ಹುದಾ, ಮಂಜುಳಾ, ರೇಣುಕಾ ಇದ್ದರು.



# ಜನಸ್ತೋಮದ ಮಧ್ಯೆ ಕೊಪ್ಪಳ ಗವಿಸಿದ್ದೇಶ್ವರ ರಥೋತ್ಸವ

**ಕೊಪ್ಪಳ:** ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ನಾಡಿನ ಸುಪ್ರಸಿದ್ಧ ಗವಿಮಠದ ಗವಿಸಿದ್ದೇಶ್ವರ ಸ್ವಾಮಿಯ ಜಾತ್ರೆಯ ಮಹಾ ರಥೋತ್ಸವ ಬುದುವಾರ ಅದ್ದೂರಿಯಾಗಿ ಜರುಗಿತು.

ಬುಧವಾರ ಸಂಜೆ 5.50 ರ ಸಮಯಕ್ಕೆ ದಕ್ಷಿಣದ ಕುಂಭಮೇಳ ಎಂಸು ಪ್ರಖ್ಯಾತಿ ಪಡೆದ ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಸ್ವಾಮಿಯ ರಥೋತ್ಸವಕ್ಕೆ ನಾಡಿನ ಪ್ರಖ್ಯಾತ ಸಂಗೀತ ವಿದ್ವಾಂಸ, ಪದ್ಮಶ್ರೀ ಎಂ.ವೆಂಕಟೇಶ್ ಕುಮಾರ್ ಅವರಿಂದ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಗವಿಮಠದ ಅಭಿನವ ಗವಿಶ್ರೀಗಳು, ಸಿದ್ದಗಂಗಾ ಮಠದ ಡಾ ಸಿದ್ದಲಿಂಗ ಸ್ವಾಮೀಜಿಗಳು ಮತ್ತು ಚಲನಚಿತ್ರ ನಿರ್ದೇಶಕ ನಾಗತೀಹಳ್ಳಿ ಚಂದ್ರಶೇಖರ ಸೇರಿದಂತೆ ಅನೇಕ ಗಣ್ಯರು, ನಾಡಿನ ವಿವಿಧ ಮಠಗಳಿಂದ ಬಂದ ಶ್ರೀಗಳು, ಹರ,ಗುರು, ಚರ ಮೂರ್ತಿಗಳು ಉಪಸ್ಥಿತರಿದ್ದರು.



ಈ ಸಂದರ್ಭದಲ್ಲಿಆಶೀರ್ವಚನ ನೀಡಿದ ಸಿದ್ದಲಿಂಗ ಮಹಾಸ್ವಾಮಿಗಳು, ಗವಿಸಿದ್ದೇಶ್ವರ ಜಾತ್ರೆಗೆ ಸರಿ ಸಾಟಿ ಮತ್ತೊಂದಿಲ್ಲ, ಇಲ್ಲಿ ಸೇರುವ ಲಕ್ಷಾಂತರ ಭಕ್ತರನ್ನು ನೋಡಿ ಮನಸ್ಸು ಪ್ರಸನ್ನವಾಗಿದೆ. ಆಕಾಶಕ್ಕೆ ಆಕಾಶವೇ ಸಾಟಿ, ಸಮುದ್ರಕ್ಕೆ ಸಮುದ್ರವೇ ಸಾಟಿ, ಕೊಪ್ಪಳ ಜಾತ್ರೆಗೆ ಕೊಪ್ಪಳ ಜಾತ್ರೆಯೇ ಸಾಟಿ, ಇದೊಂದು ಕುಂಭಮೇಳ, ಅನ್ನ, ಅಕ್ಷರ, ಆಸರೆ ನೀಡುವ ಗವಿಮಠ ಈ ನಾಡಿನ ಇನ್ನೊಂದು ಸಿದ್ದಗಂಗೆ ಎಂದರು ಎಂದು ಹೇಳಿದರು.

ಅಭಿನವ ಗವಿಶ್ರೀಗಳು ಆಶೀರ್ವಚನ ನೀಡಿ, ನಿಸರ್ಗವು ಮನು?ನಿಗೆ ಎಲ್ಲವನ್ನೂ ಕೊಟ್ಟಿದೆ. ನಿಸರ್ಗದಂತೆ ಮನು?ನೂ ಸಹ ಇನ್ನೂ ಹೆಚ್ಚಿನ ಅರ್ಪಣಾ ಭಾವ ಬೆಳೆಸಿಕೊಳ್ಳಬೇಕು. ನಾಡಿನ ಮೂಲೆ ಮೂಲೆಯಿಂದ ಭಕ್ತರು ದವಸ, ದಾನ್ಯ ಅರ್ಪಿಸಿ ಅಜ್ಜನಿಗೆ ಅರ್ಪಿಸಿ ಕೃತಾರ್ಥರಾಗಿದ್ದಿರಿ ಎಂದು ಹೇಳಿದರು.

ಜಾತ್ರೆಗೆ ಬಂದಂತಹ ಲಕ್ಷಾಂತರ ಭಕ್ತರು ಜಿಲೇಬಿ, ಮಾದಲಿ, ಹೋಳಿಗೆ, ರೊಟ್ಟಿ, ಚಪಾತಿ, ಪಲ್ಯೆ ಸೇರಿದಂತೆ ಉತ್ತರ ಕರ್ನಾಟಕದ ಖಾದ್ಯಗಳ ಪ್ರಸಾದವನ್ನು ಸೇವಿಸಿದರು.

# ಬಿಳಿಗಿರಿರಂಗನ ಬೆಟ್ಟದಲ್ಲಿ ವರ್ಷದ ಮೊದಲ ರಥೋತ್ಸವಕ್ಕೆ ಭಕ್ತ ಸಾಗರ

**ಚಾಮರಾಜನಗರ:** ಜಿಲ್ಲೆಯ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಬಿಳಿಗಿರಿರಂಗನಾಥಸ್ವಾಮಿ ಸಂಕ್ರಾಂತಿ ರಥೋತ್ಸವ (ಚಿಕ್ಕಜಾತ್ರೆ) ಸಾವಿರಾರು ಭಕ್ತರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪ್ರತಿ ವರ್ಷ ಸಂಕ್ರಾಂತಿ ಹಬ್ಬದ ಮಾರನೇ ದಿನ ರಥೋತ್ಸವ ನಡೆಯಲಿದೆ. ರಥೋತ್ಸವ ಹಿನ್ನಲೆಯಲ್ಲಿ ವಿವಿಧ ಬಗೆಯ ಹೂಗಳಿಂದ ತೇರನ್ನು ಸಿಂಗರಿಸಲಾಗಿತ್ತು. ಬೆಳಗ್ಗೆ 11:55 ರಿಂದ 12.06 ರೊಳಗೆ ಸಲ್ಲುವ ಮೀನಾ ಲಗ್ನದಲ್ಲಿ ರಥೋತ್ಸವ ನಡೆಯಿತು.ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಭಕ್ತರು ಗೋವಿಂದ ಗೋವಿಂದ ಎಂಬ ಜಯ ಘೋಷದೊಂದಿಗೆ ತೇರನ್ನು ಎಳೆದರು. ಮಹಾ ರಥೋತ್ಸವದಲ್ಲಿ ಪ್ರಮುಖವಾಗಿ ಶಂಖ, ಜಾಗಟೆಯ ನೀನಾದ ಮೊಳಗಿದವು.

ದೇವಸ್ಥಾನಕ್ಕೆ ಸುತ್ತು ಹಾಕಿದ ತೇರು ಬಳಿಕ ಸ್ವಸ್ಥಾನದಲ್ಲಿ ಬಂದು ಸೇರಿತ್ತು. ರಥೋತ್ಸವಕ್ಕೆ ಆಗಮಿಸಿದ ನವ ಜೋಡಿಗಳು ಹಾಗೂ ಭಕ್ತರು ತೆರಿಗೆ ಹಣ್ಣು, ದವನ ಎಸೆದು ಹರಕೆ ತೀರಿಸಿದರು. ಅಲ್ಲದೆ ಹೊಸ ವರ್ಷದ ಮೊದಲ ರಥೋತ್ಸವ



ಹಿನ್ನೆಲೆಯಲ್ಲಿ ಈ ಭಾಗದ ರೈತರು ತಾವು ಬೆಳೆದ ದವಸ, ಧಾನ್ಯಗಳನ್ನು ತೆರಿಗೆ ಎಸೆದು ದೇವರಿಗೆ ಸಮರ್ಪಿಸಿದರು. ಆ ಮೂಲಕ ಮುಂದಿನ ಇಳುವರಿ ವೃದ್ಧಿಸುವಂತೆ ದೇವರಲ್ಲಿ ಮೊರೆ ಇಟ್ಟರು.

ಬಿಳಿಗಿರಿರಂಗನಬೆಟ್ಟ ಸೇರಿದಂತೆ ಸುತ್ತಮುತ್ತಲಿನ ಅರಣ್ಯದ ಪೋಡುಗಳಲ್ಲಿ ವಾಸಿಸುವ ಸಾವಿರಾರು ಸೋಲಿಗರು ಕಾಲ್ನಡಿಗೆಯಲ್ಲಿ ಬೆಟ್ಟಕ್ಕೆ ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡರು. ಸೋಲಿಗರೆ ಈ ತೇರು ಕಟ್ಟುವುದು ಇಲ್ಲಿನ ವಿಶೇಷ.

ಬಿಳಿಗಿರಿರಂಗನಾಥಸ್ವಾಮಿ ಸೋಲಿಗರ ಕುಸುಮಾಲೆಯನ್ನು ವರಿಸಿದ್ದ ಹಿನ್ನೆಲೆಯಲ್ಲಿ ಸೋಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ರಂಗಭಾವ ಎಂದು ರಂಗಪ್ಪನನ್ನು ಕರೆಯುತ್ತಾರೆ.

ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ ಬಿಳಿಗಿರಿರಂಗನಾಥಸ್ವಾಮಿ ಒಕ್ಕಲಿನವರು ಹಾಗೂ ಭಕ್ತರು ಅಕ್ಕಿ, ಬೆಲ್ಲ, ಕಾಯಿಯನ್ನು ನೀರಿನಲ್ಲಿ ನೆನೆಸಿ ಅದಕ್ಕೆ ಕಜ್ಜಾಯ ಬೆರೆಸಿ ಬ್ಯಾಟಿಮಣೆ ಹಾಕಿ ಅದನ್ನು ಪ್ರಸಾದ ಎಂದು ಸ್ವೀಕರಿಸಿದರು. ಅಲ್ಲದೆ ರಥೋತ್ಸವದಲ್ಲಿ ಭಕ್ತರಿಗೆ ನೀರು, ಮಜ್ಜಿಗೆ, ಪಾನಕ, ಪುಳಿಯೋಗರೆಯನ್ನು ವಿತರಿಸಲಾಯಿತು. ಅಲ್ಲದೇ ಕೆಎಸ್‌ಆರ್‌ಟಿಸಿ ವತಿಯಿಂದ 80 ಬಸ್ಗಳನ್ನು ಬಿಡಲಾಗಿತ್ತು.

ಜಾತ್ರೆ ಹಿನ್ನೆಲೆಯಲ್ಲಿ ಟ್ರಾಫಿಕ್ ಜಾಮ್ ತಪ್ಪಿಸುವ ನಿಟ್ಟಿನಲ್ಲಿ ಬೆಟ್ಟಕ್ಕೆ ದ್ವಿ ಚಕ್ರ ವಾಹನಗಳನ್ನು ನಿಷೇಧಿಸಲಾಗಿತ್ತು. ಬೈಕ್ನಲ್ಲಿ ಬಂದ ಭಕ್ತರು ಚೆಕ್ ಪೋಸ್ಟ್ ಬಳಿ ಬೈಕ್ಗಳನ್ನು ನಿಲ್ಲಿಸಿ ಅಲ್ಲಿಂದ ಸಾರಿಗೆ ಬಸ್ಗಳಲ್ಲಿ ಬೆಟ್ಟಕ್ಕೆ ತೆರಳಿದರು. ಅಲ್ಲದೇ ಬೆಟ್ಟದಲ್ಲಿ ಪ್ರಾಣಿ ಬಲಿ ನಿಷೇಧ ಹಿನ್ನೆಲೆಯಲ್ಲಿ ಚೆಕ್ಪೋಸ್ಟ್ನಲ್ಲಿ ಪ್ರಾಣಿಗಳನ್ನು ಕೊಂಡೊಯ್ಯದಂತೆ ತಡೆ ಹಿಡಿಯಲಾಯಿತು. ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

# ಗ್ರಾಮೀಣ ಜನರ ಆರೋಗ್ಯ ಸೇವೆ ಕಲ್ಪಿಸುವ ಸಂಕಲ್ಪ

**ನಾಗಮಂಗಲ:**15 ಗ್ರಾಮಾಂತರ ಪ್ರದೇಶದ ಜನರ ಆರೋಗ್ಯ ಸೇವೆ ಕಲ್ಪಿಸುವ ಸದುದ್ದೇಶದಿಂದ ನಮ್ಮ ಕ್ಲಿನಿಕ್ ಆರಂಭ ಮಾಡುವುದರಿಂದ ಗ್ರಾಮೀಣ ಜನರು ಆರೋಗ್ಯ ಸೇವೆಸದುಪಯೋಗಪಡಿಸಿಕೊಳ್ಳಲು ಕೃಷಿ ಸಚಿವರಾದ ಚೆಲುವರಾಯಸ್ವಾಮಿ ಕರೆ ನೀಡಿದರು.

ಅವರು ಇಂದು ನಾಗಮಂಗಲ ತಾಲೂಕು ಬೆಳ್ಳೂರು ಟೌನ್ ನ ಒಂದನೇ ವಾರ್ಡಿನಲ್ಲಿ ನಮ್ಮ ಕ್ಲಿನಿಕ್ ಕೇಂದ್ರವನ್ನ ಉದ್ಘಾಟನೆ ಮಾಡುತ್ತಾ ಮಾತನಾಡಿದರು.

ಗ್ರಾಮೀಣ ಜನರು ಮೊದಲು ಆರೋಗ್ಯ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದರ ಜೊತೆಗೆ ನಂತರ ಜನಪರ ಕಾರ್ಯಕ್ರಮಗಳಿಗೆ ನೀಡುವ ಮುಖಾಂತರ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವ ಮುಖಾಂತರ ಗ್ರಾಮೀಣ ಜನರ ಬದುಕು ಹಸನವಾಗಬೇಕೆಂಬ ಸಂಕಲ್ಪ ಹಾಗೂ ಸರ್ಕಾರದಿಂದ ಆರೋಗ್ಯ ಸೇವಗಳಿಗೆ ಉಚಿತ ಸೇವೆಗಳು ಲಭ್ಯವಿದ್ದು ಆ ವೆಚ್ಚವು ಸರ್ಕಾರವೇ ಭರಿಸಲಿದ್ದು ಅಂತಹ ಆರೋಗ್ಯ ವ್ಯವಸ್ಥೆಯನ್ನು ಸ್ಥಳೀಯ ಆಸ್ಪತ್ರೆಗಳಲ್ಲಿ ಬಳಸಿಕೊಳ್ಳುವ ಮುಖಾಂತರ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ಬೆಳ್ಳೂರು ಟೌನ್ ಪಂಚಾಯತಿ ವ್ಯಾಪ್ತಿಯಲ್ಲಿ ಮುಂದಿನ ದಿನಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರುವ ಮುಖಾಂತರ ಹಂತ ಹಂತವಾಗಿ ಅಭಿವೃದ್ಧಿಗೊಳಿಸುವ ಗುರಿ ನಮ್ಮದಾಗಿದೆ ಎಂದು ತಿಳಿಸಿದರು.

# ಭೂ ದಾಖಲೆಗಳ ಡಿಜಿಟಲೀಕರಣದಿಂದ ಜನರಿಗೆ ಅನುಕೂಲ: ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ: ಭೂ ದಾಖಲೆಗಳನ್ನು ಡಿಜಿಟ ಲೀಕರಣ ಮಾಡುವುದರಿಂದ ಜನರಿಗೆ ಅನುಕೂಲವಾಗಲಿದೆ ಎಂದು ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕ್ಷೇತ್ರದ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಚಾಮರಾಜನಗರದ ತಾಲೂಕು ಕಚೇರಿಯ ನೂತನ ಅಭಿಲೇಖಾಲಯ ಶಾಖೆಯನ್ನು ಉದ್ಘಾಟಿಸಿ ಭೂ ಸುರಕ್ಷಾ ಮತ್ತು ಭೂ ದಾಖಲೆಗಳ ಡಿಜಿಟಲೀಕರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಹಳೆಯ ಭೂ ದಾಖಲೆಗಳನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರವು ಭೂ ಸುರಕ್ಷಾ ಯೋಜನೆಯಡಿ ದಾಖಲೆ ಸಂಬಂಧಿಸಿದಂತಹ ದಾಖಲೆಗಳನ್ನು ಪಡೆಯಲು ಕಚೇರಿಗೆ ಅಲೆಯುವುದು ತಪ್ಪುತ್ತದೆ. ಇದೊಂದು ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾಗಿದೆ ಎಂದರು.



,ಈ ಯೋಜನೆಯಿಂದ ದುಸ್ಥಿತಿಯಲ್ಲಿರುವ ಹಳೆಯ ಭೂ ದಾಖಲೆಗಳು ಡಿಜಿಟಲೀಕರಣಗೊಂಡು ಪರಿವರ್ತನೆಯಾಗುತ್ತವೆ. ಇದರಿಂದ ರೈತರೇ ನೇರವಾಗಿ ಡಿಜಿಟಲ್ ಮಾಧ್ಯಮದಿಂದ ಭೂ ಗಳನ್ನು ಡಿಜಿಟಲೀಕರಣ ದಾಖಲೆಗಳನ್ನು ಪಡೆಯಬಹುದು. ಜೊತೆಗೆ ಈ ದಾಖಲೆಗಳು ಶಾಶ್ವತವಾಗಿ ಉಳಿಯುವುದರಿಂದ ಮಾಡಲು ಮುಂದಾಗಿದೆ. ರೈತರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಗಿರಿಜಾ ಇದರಿಂದ ರೈತರು ಭೂಮಿಗೆ ಸೇರಿದಂತೆ ಇತರರಿದ್ದರು.

# ಕರ್ತವ್ಯಲೋಪ ಪೊಲೀಸ್ ಪೇದೆ ಅಮಾನತು!

▪ **ರಾಮಸಮುದ್ರ ಎಸ್.ವೀರಭದ್ರಸ್ವಾಮಿ**

ಚಾಮರಾಜನಗರ: ಅಕ್ರಮ ಜೂಜಾಟ ನಡೆಯುತ್ತಿದ್ದರೂ ಸಹ ಅದರ ಬಗ್ಗೆ ಮಾಹಿತಿ ಸಂಗ್ರಹಿಸಿ, ಮೇಲಾಧಿಕಾರಿಗಳಿಗೆ ವರದಿ ಮಾಡದೆ, ತಮ್ಮ ಆದ್ಯ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿ ಕರ್ತವ್ಯಲೋಪವೆಸಗಿರುವ ಸಂಬಂಧ ಪೇದೆಯೊಬ್ಬರನ್ನ ಸೇವೆಯಿಂದ ಎಸ್ಪಿ ಬಿ.ಟಿ.ಕವಿತಾರವರು ಅಮಾನತ್ತುಗೊಳಿಸಿದ್ದಾರೆ

ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯ ಗುಪ್ತಮಾಹಿತಿ ಸಿಬ್ಬಂದಿ ಅಶೋಕ್ ಎಂಬುವವರೆ ಅಮಾನತ್ತು ಗೊಂಡವರಾಗಿದ್ದಾರೆ.

ಗ್ರಾಮಾಂತರ ಠಾಣಾ ಸರಹದ್ದಿನಲ್ಲಿ ಅಕ್ರಮ ಜೂಜಾಟ ನಡೆಯುತ್ತಿದ್ದರೂ ಸಹ ಈ ಬಗ್ಗೆ ಮಾಹಿತಿ ಸಂಗ್ರಹಿಸಿ,ಮೇಲಾಧಿಕಾರಿ ಗಳಿಗೆ ವರದಿ ಮಾಡದೆ, ತಮ್ಮ ಆದ್ಯ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿ ಕರ್ತವ್ಯ ಲೋಪವೆಸಗಿರುವ ಸಂಬಂಧ ಸೇವೆಯಿಂದ ಅಮಾನತ್ತು ಗೊಳಿಸಿರುವುದಾಗಿ ಉಲ್ಲೇಖಿಸಲಾಗಿದೆ. ಗ್ರಾಮಾಂತರ ಠಾಣಾ ವ್ಯಾಪ್ತಿಯ ವೀರನಪುರ ಗ್ರಾಮದ ನಾಗರಾಜು ಎಂಬುವವರ ಜಮೀನಿಗೆ ಹೋಗುವ ಸಾರ್ವಜನಿಕ ರಸ್ತೆಯ ಮೇಲೆ ಹಣವನ್ನು ಪಣವನ್ನಾಗಿ ಕಟ್ಟಿಕೊಂಡು ಅಂದರ್‌ಬಾಹರ್ ಎಂಬ ಇಸ್ಪೀಟ್ ಜೂಜಾಟವನ್ನು ಆಡುತ್ತಿದ್ದವರ ಬಗ್ಗೆ ಮಾಹಿತಿ ಸಂಗ್ರಹಿಸಿ, ಕಾನೂನು ರೀತ್ಯಾ ಕ್ರಮವಹಿಸದೇ ನಿರ್ಲಕ್ಷ್ಯತೆ ವಹಿಸಿದ್ದರು, ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಚಾಮರಾಜನಗರ ಜಿಲ್ಲಾ ಪೊಲೀಸ್ ಕಛೇರಿಯ ಡಿ.ಎಸ್.ಬಿ. ವಿಭಾಗದ ಪೊಲೀಸ್ ನಿರೀಕ್ಷಕರವರಾದ ಎಲ್.ಸಿ.ಶ್ರೀಧರ್ ರವರು ರಾತ್ರಿ ಗಸ್ತು ಸಂದರ್ಭದಲ್ಲಿ ತೆರಕಣಾಂಬಿ ಪೊಲೀಸ್ ಠಾಣೆಯ ಪಿಎಸ್‌ಐ,ಶ್ರೀ ಮಹೇಶ್ ಮತ್ತು ಸಿಬ್ಬಂದಿಗಳ ಜೊತೆ ಹೊಸ ವರ್ಷದ ದಿನದ ಬೆಳಗ್ಗಿನ ಜಾವ 02:30 ಗಂಟೆಗೆ ದಾಳಿ ನಡೆಸಿ ನಗದು ರೂ.1.66,650/–, 06 ಬೈಕ್‌ಗಳು, ಇಸ್ಪೀಟ್ ಜೂಜಾಟ ಆಡುತ್ತಿದ್ದ 11 ಜನರನ್ನು ವಶಕ್ಕೆ ಪಡೆದು ಚಾಮರಾಜನಗರ ಗ್ರಾಮಾಂತರ ಠಾಣೆಗೆ ವರದಿ ನೀಡಿ ಪ್ರಕರಣ ದಾಖಲಿಸಿದ್ದರು.

ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಗುಪ್ತ ಮಾಹಿತಿ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಶೋಕ್,ಠಾಣಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಬಗ್ಗೆ ಗುಪ್ತಮಾಹಿತಿ ಸಂಗ್ರಹಿಸಿ, ಮೇಲಾಧಿಕಾರಿಗಳಿಗೆ ವರದಿ ಮಾಡುವುದು ನಿಮ್ಮ ಆದ್ಯ ಕರ್ತವ್ಯವಾಗಿದ್ದರೂ ಸಹ ಅಕ್ರಮ ಜೂಜಾಟ ನಡೆಯುತ್ತಿದ್ದರೂ ಸಹ ಮಾಹಿತಿ ಸಂಗ್ರಹಿಸುವಲ್ಲಿ ತೀವ್ರ ನಿರ್ಲಕ್ಷ್ಯತೆ ಹಾಗೂ ಬೇಜಬಾಬ್ದಾರಿತನ ಪ್ರದರ್ಶಿಸಿರುವುದಲ್ಲದೇ, ಠಾಣಾ ವ್ಯಾಪ್ತಿಯಲ್ಲಿ ಮೇಲ್ಕಂಡಂತೆ ಅಕ್ರಮ ಇಸ್ಪೀಟ್ ಜೂಜಾಟ ನಡೆಯಲು ಪರೋಕ್ಷವಾಗಿ ಕಾರಣಕರ್ತರಾಗಿ ಕರ್ತವ್ಯದಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನಲೆಯಲ್ಲಿ ಇಲಾಖಾ ವಿಚಾರಣೆ ಹಾಗೂ ಇಲಾಖಾ ಶಿಸ್ತಿನ ಕ್ರಮ ಬಾಕಿ ಇರಿಸಿಕೊಂಡು ಎಸ್ಪಿ ಕವಿತಾರವರು "ಸೇವೆಯಿಂದ ಅಮಾನತ್ತುಗೊಳಿಸಿ" ಆದೇಶಿಸಿದ್ದಾರೆ.

ಚಾಮರಾಜನಗರ ಪಟ್ಟಣದಲ್ಲೂ ಕ್ಲಬ್ ಮೇಲೆ ದಾಳಿ ನಡೆಸಿದ ಡಿಎಸ್ಬಿ ಶಾಖೆಯ ಇನ್ಸ್ ಪೆಕ್ಟರ್ ಶ್ರೀಧರ್ ಅವರು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿದ ಮೇರೆಗೆ ಎಸ್ಪಿ ಅವರು ಗುಪ್ತ ಮಾಹಿತಿ ಸಿಬ್ಬಂದಿ ಸೇರಿದಂತೆ ಇಬ್ಬರು ಅಮಾನತು ಮಾಡಿದ್ದರು. ಇದರ ಬೆನ್ನ ಹಿಂದೆಯೆ ಇದೀಗ ಗ್ರಾಮಾಂತರ ಗುಪ್ತ ಮಾಹಿತಿ ಸಿಬ್ಬಂದಿ ಅಶೋಕ್ ಅವರನ್ನು ಅಮಾನತು ಮಾಡಲಾಗಿದೆ.

ಇತ್ತೀಚೆಗೆ ಜಾನುವಾರುಗಳ ಸಾಗಾಣಿಕೆಯಲ್ಲೂ ಠಾಣೆಯೊಂದರ ಪೊಲೀಸರ ಪಾತ್ರ ಇದೆ ಎಂದು ಕೇಳಿ ಬರುತ್ತಿದ್ದು ಅದು ಕೂಡ ವಿಚಾರಣೆ ನಡೆಸುವ ಸಾದ್ಯತೆ ಇದೆ ಎಂದು ಕೇಳಿಬರುತ್ತಿದೆ.

ಜಿಲ್ಲೆಯಲ್ಲಿ ಯಾವ್ದೆ ತರಹದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹರಿಸಿದವರಿಗೆ ಇಲಾಖಾ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಹೇಳಿದ್ದರು.ಇದೀಗ ಅದರಂತೆ ಜೂಜು, ಮದ್ಯ ಜಾನುವಾರು ಸಾಗಾಣಿಕೆಯಲ್ಲಿ ಸಹಕರಿಸಿದವರಿಗೆ ಇಲಾಖಾ ಕ್ರಮ ವಹಿಸುತ್ತಿದೆ. ಇತ್ತ ಡಿಎಸ್ಬಿ ಶಾಖೆಯ ಇನ್ಸ್‌ಪೆಕ್ಟರ್ ಶ್ರೀದರ್ ಅವರ ಕಾರ್ಯಕ್ಷಮತೆಯನ್ನ ಸಾರ್ವಜನಿಕರು ಪ್ರಶಂಸಿಸಿದ್ದಾರೆ.

# ರಾಮಲಿಂಗೇಶ್ವರ ಸ್ವಾಮಿ ಬ್ರಹ್ಮರಥೋತ್ಸವ

**ಶಿಡ್ಲಘಟ್ಟ:** ತಾಲ್ಲೂಕಿನ ನಲ್ಲರಾಳ್ಳಹಳ್ಳಿ ಬಳಿಯಿರುವ ರಾಮಲಿಂಗೇಶ್ವರ ಬೆಟ್ಟದ ರಾಮಲಿಂಗೇಶ್ವರ ಸ್ವಾಮಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ಬ್ರಹ್ಮರಥೋತ್ಸವಕ್ಕೆ ಶಾಸಕರಾದ ಬಿ.ಎನ್ ರವಿಕುಮಾರ್ ಹಾಗೂ ತಹಸೀಲ್ದಾರ್ ಬಿ.ಎನ್. ಸ್ವಾಮಿ ಅವರು ಚಾಲನೆ ನೀಡಿದರು. ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅಲಂಕರಿಸಲಾಯಿತು,ಉತ್ಸವ ಮೂರ್ತಿಯನ್ನು ದೇವಸ್ಥಾನದ ಸುತ್ತ ಮೆರವಣಿಗೆ ನಡೆಸಿ, ರಥಕ್ಕೆ ತಂದು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು.

ಬಳಿಕ ಭಕ್ತರು ರಥವನ್ನು ದೇವಸ್ಥಾನದ ಹೊರಭಾಗದ ಸುತ್ತ ಜಯ ಘೋಷ ಕೂಗಿ ರಥ ಎಳೆದು, ನೆರೆದಿದ್ದ ಭಕ್ತರು ರಥದ ಮೇಲೆ ಬಾಳೆ ಹಣ್ಣು ಎಸೆದು ಭಕ್ತಿಯಿಂದ ನಮಿಸಿದರು ಭಕ್ತಾದಿಗಳು ಉತ್ಸಾಹದಿಂದ ರಥ ಎಳೆದರು, ತಾಲ್ಲೂಕಿನ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು.

ಶ್ರೀರಾಮ ವನವಾಸದ ಕಾಲದಲ್ಲಿ ಸ್ಥಾಪಿಸಿದ್ದ ಇಷ್ಟಲಿಂಗವಿರುವ ಕ್ಷೇತ್ರ ರಾಮಲಿಂಗೇಶ್ವರ ದೇಗುಲದ ಎಂಬ ರಾಮಾಯಣದ ಹಿನ್ನೆಲೆ, ಚೋಳರ ಕಾಲದ ಕೆತ್ತನೆಗಳುಳ್ಳ ದೇಗುಲ, ನೂರಾರು ವರ್ಷಗಳ ಇತಿಹಾಸ ಸಾರುವ ಶಿಲ್ಪಗಳು, ಸಾವಿರಾರು ವರ್ಷದಿಂದ ಕದಲದೇ ಇರುವ ಬೆಟ್ಟ ಇದಾಗಿದೆ.

ರಾಮದೊಣೆ,ಸೀತಾದೀಣೆ ಮತ್ತು ಲಕ್ಷ್ಮಣದೊಣೆಗಳೆಂಬ ನೀರಿನ ಸೆಲೆಗಳಾದ ದೊಣೆಗಳು ಇಲ್ಲಿವೆ ಇವುಗಳಲ್ಲಿ ಸದಾ ನೀರು ತುಂಬಿರುತ್ತವೆ ಅವುಗಳನ್ನು ಶ್ರೀರಾಮಚಂದ್ರ ಪ್ರಭು ನಿರ್ಮಿಸಿದ್ದರು ಎಂಬ ಪ್ರತೀತಿ ಇದ್ದು ಭಕ್ತಾದಿಗಳು ಆ ದೋಣೆಗಳಿಂದ ನೀರನ್ನು ಮೊಗೆದು ತಲೆಗೆ ಸಿಂಪಡಿಸಿಕೊಳ್ಳುತ್ತಿದ್ದರು.

ಜಾತ್ರೆಯ ಅಂಗವಾಗಿ ವಿವಿಧಡೆಯಿಂದ ಬೆರಳೆಣಿಕೆ ಅಷ್ಟು ದನಗಳು ಸೇರಿದವು ಅಂಗಡಿ ಮುಂಗಟ್ಟುಗಳು, ವಿವಿಧ ಆಟಿಕೆಗಳು,ಬರಗು ಬತ್ತಾಸು ಅಂಗಡಿಗಳಲ್ಲಿ ವ್ಯಾಪಾರ ಜೋರಾಗಿತ್ತು ಮಕ್ಕಳ ಮನೋರಂಜನೆಯ ಗಿಲಕಿ,ಗೊಂಬೆ,ಚುಕುಬುಕು ರೈಲು, ಬಿಸಿಬಿಸಿ ಬೋಂಡ, ಬಣ್ಣಬಣ್ಣದ ಶರಬತ್ತು ಅಂಗಡಿಗಳು, ಮಹಿಳೆಯರ ಅಲಂಕಾರಿಕ ವಸ್ತುಗಳು ಅಂಗಡಿಗಳು ತಲೆ ಎತ್ತಿದ್ದವು.

ಶಾಸಕರಾದ ಬಿ.ಎನ್.ರವಿಕುಮಾರ್ ಮಾತನಾಡಿ, ರಾಮಲಿಂಗೇಶ್ವರ ಸ್ವಾಮಿಯು ಈ ಕ್ಷೇತ್ರದಲ್ಲಿ ಎಲ್ಲರಿಗೂ ಕಾಪಾಡಲಿ ಹಾಗೂ ಈ ಒಂದು ರಾಮಲಿಂಗೇಶ್ವರ ಬ್ರಹ್ಮ ರಥೋತ್ಸವದಲ್ಲಿ ಭಾಗವಹಿಸಿ ಸ್ವಾಮಿಯ ಆಶೀರ್ವಾದದಿಂದ ಎಲ್ಲಾ ನಮ್ಮ ಮುಖಂಡರ ಸಮ್ಮುಖದಲ್ಲಿ ಚಾಲನೆ ನೀಡಿದ್ದೇವೆ.ಮುಂದೆ ಈ ಕ್ಷೇತ್ರಕ್ಕೆ ಒಳ್ಳೆಯದಾಗಬೇಕು ಮುಂದೆ ಎಲ್ಲರೂ ನೆಮ್ಮದಿಯಾಗಿರಬೇಕೆಂದು ಶುಭ ಕೋರಿದರು.

ರಾಮಲಿಂಗೇಶ್ವರ ಸ್ವಾಮಿಯು ಈ ಕ್ಷೇತ್ರದಲ್ಲಿ ಎಲ್ಲರಿಗೂ ಕಾಪಾಡಲಿ ಹಾಗೂ ಈ ಒಂದು ರಾಮಲಿಂಗೇಶ್ವರ ಬ್ರಹ್ಮ ರಥೋತ್ಸವದಲ್ಲಿ ಭಾಗವಹಿಸಿ ಸ್ವಾಮಿಯ ಆಶೀರ್ವಾದದಿಂದ ಎಲ್ಲಾರ ಸಮ್ಮುಖದಲ್ಲಿ ಚಾಲನೆ ನೀಡಿದ್ದೇವೆ ಮುಂದೆ ಈ ಕ್ಷೇತ್ರಕ್ಕೆ ಒಳ್ಳೆಯದಾಗಬೇಕು ಮುಂದೆ ಎಲ್ಲರೂ ನೆಮ್ಮದಿಯಾಗಿರಬೇಕೆಂದು ಶುಭ ಹಾರೈಸಿದರು.

ಕ್ಷೇತ್ರದ ಪುಣ್ಯಕ್ಷೇತ್ರ ನಲ್ಲರಾಳಹಳ್ಳಿಯ ಶ್ರೀ ರಾಮಲಿಂಗೇಶ್ವರ ಸ್ವಾಮಿಯ ಕೃಪೆಯಿಂದ ಸಕಾಲದಲ್ಲಿ ಮಳೆಬೆಳೆಗಳಾಗಿ ರೈತರು ಮತ್ತು ಜನಸಾಮಾನ್ಯರು ಸಮೃದ್ಧಿಯಿಂದ ಜೀವನ ನಡೆಸುವಂತಾಗಲಿ ಜನರ ಹರಿಕೆ ಮತ್ತು ಕೋರಿಕೆಗಳು ಈಡೇರಲಿಯೆಂದು ದೇವರಲ್ಲಿ ಪ್ರಾರ್ಥಿಸಿದರು.

ಕೆಪಿಸಿಸಿ ಸಂಯೋಜಕರಾದ ರಾಜೀವ್ ಗೌಡ ಮಾತನಾಡಿ, ನಲ್ಲರಾಳಹಳ್ಳಿಯ ಶ್ರೀರಾಮಲಿಂಗೇಶ್ವರ ಸ್ವಾಮಿಯ ಕೃಪೆಯಿಂದ ಸಕಾಲದಲ್ಲಿ ಮಳೆಬೆಳೆಗಳಾಗಿ ರೈತರು ಮತ್ತು ಜನಸಾಮಾನ್ಯರು ಸಮೃದ್ಧಿಯಿಂದ ಜೀವನ ನಡೆಸುವಂತಾಗಲಿ ಜನರ ಹರಿಕೆಗಳು ಈಡೇರಲಿ ಎಂದು ದೇವರಲ್ಲಿ ಅವರು ಪ್ರಾರ್ಥಿಸಿದರು.

ಅಮ್ಮಗಾರಹಳ್ಳಿ ಭೈರಾರೆಡ್ಡಿ ಮಾತನಾಡಿ, ದೇವಸ್ಥಾನದ ಕನ್ವಿನರ್ ಆಗಿದ್ದ ಎಂ.ಸುನೀತ ಶ್ರೀನಿವಾಸರೆಡ್ಡಿ ಅವರು ದೇವಸ್ಥಾನದ ಅಭಿವೃದ್ಧಿಗಾಗಿ ಅವರತ ಶ್ರವಿಸುತ್ತಿದ್ದು,ಪ್ರವಾಸೋದ್ಯಮ ಇಲಾಖೆಯಿಂದ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು,ಕಾಂಪೌಂಡ್ ಕೂಡ ಕಟ್ಟಲಾಗಿದೆ ,ಬಶೆಟ್ಟಹಳ್ಳಿ ಗೇಟ್ ನಲ್ಲಿ 14 ಲಕ್ಷ 50 ಸಾವಿರ ರೂ.ಗಳ ವೆಚ್ಚದಲ್ಲಿ ಸುಂದರ ಸ್ವಾಗತ ಕಮಾನು,ಬ್ರಹ್ಮರಥೋತ್ಸವಕ್ಕೆ ವಿವಿಧ ತಾಲ್ಲೂಕುಗಳಿಂದ ಆಗಮಿಸುವ ಪ್ರವಾಸಿಗರು ತಂಗಲು ವಸತಿ ಕೊಠಡಿಗಳು, ಇಲ್ಲಿರುವ ಇತಿಹಾಸ ಪ್ರಸಿದ್ಧ ನೀರಿನ ದೋಣಿಗಳ ಸುತ್ತ ರಕ್ಷಣೆಗೆ ಗ್ರಿಲ್ ಗಳು ಹಾಗೂ ದೇವಸ್ಥಾನದ ಸುತ್ತ ಕಾಂಕ್ರೀಟ್ ಹಾಕಿಸಿ, ಸ್ವಚ್ಛತೆಗೆ ಆದ್ಯತೆ ನೀಡಲಿದ್ದಾರೆ ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಬಿ.ಎನ್.ಸ್ವಾಮಿ, ದೇವಾಲಯದ ಕನ್ವಿನರ್ ಸುನೀತಾಶ್ರೀನಿವಾಸ್ ರೆಡ್ಡಿ ,ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ವಿ. ನಾರಾಯಣಸ್ವಾಮಿ, ಗ್ರಾಮ ಪಂಚಾಯತಿ ಅದ್ಯಕ್ಷರಾದ ಡಿ.ಬಿ.ವೆಂಕಟೇಶ್,ತಾದೂರುರಘು, ಸೀಕಲ್ ಆನಂದ ಗೌಡ,ಸರ್ಕಲ್ ಇನ್ಸೆಕ್ಟರ್ ಶ್ರೀನಿವಾಸ್,ಕಂಬದಹಳ್ಳಿ ಸುರೇಂದ್ರಗೌಡ, ನಗರಸಭೆ ಸದಸ್ಯ ನಾರಾಯಣಸ್ವಾಮಿ, ಹಾಗೂ ಸುತ್ತ ಮುತ್ತಲಿನ ಗ್ರಾಮದ ಭಕ್ತಾದಿಗಳು ಪಾಲ್ಗೊಂಡಿದ್ದರು.



# ಆನೆ ದಂತ ಸಾಗಾಣೆ: ಇಬ್ಬರ ಬಂಧನ



**ಚಾಮರಾಜನಗರ:** ಕಾಡಾನೆಯ ದಂತವನ್ನು ಸಾಗಾಣಿಕೆಮಾಡುತ್ತಿದ್ದ ಇಬ್ಬರನ್ನು ರಾಮಾಪುರ ಪೊಲೀಸರು ಬಂಧಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿದ ಘಟನೆ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಹದೇಶ್ವರಬೆಟ್ಟ- ಕೌದಳ್ಳಿ ಮಾರ್ಗ ಮಧ್ಯ ಜರುಗಿದೆ

ತಮಿಳುನಾಡಿನ ಪೆರುಮಾಳ ಮಗ ಶಕ್ತಿವೇಲು(45) ಹಾಗೂಹನೂರಿನ ಶಂಕರ ನಾರಯಣ್ ರವರ ಮಗ ನಾಗೇಂದ್ರಬಾಬು (63)ಎಂಬಾತನೆ ಬಂಧಿತ ಆರೋಪಿಯಾಗಿದ್ದಾರೆ.

ಬಂಧಿತ ಆರೋಪಿಗಳು ಬೈಕ್ನಲ್ಲಿ ಆನೆ ದಂತವನ್ನು ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ರಾಮಾಪುರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಎಸೈ ಲೋಕೇಶ್, ಹೆಡ್ ಕಾನ್ಸ್ಟೇಬಲ್ ಗಿರೀಶ್, ಪೇದೆಗಳಾದ ಮಹೇಂದ್ರ ಲಿಯಾಖತ್ ಖಾನ್, ಪರಶುರಾಮ್, ಮಕಂದರ್ ಇವರುಗಳ ತಂಡ ಕೌದಳ್ಳಿ ಮಹದೇಶ್ವರಬೆಟ್ಟ ಮುಖ್ಯರಸ್ತೆಯಲ್ಲಿ ಬೈಕನ್ನು ತಡೆದು ಚೀಲವನ್ನು ಪರಿಶೀಲನೆ ನಡೆಸಿದಾಗ ಸುಮಾರು 2ಲಕ್ಷ ಮೌಲ್ಯದ 980 ಗ್ರಾಂ ಪತ್ತೆಯಾಗಿದೆ.

ಪಾಲರ್ ಅರಣ್ಯ ಈ ಪ್ರದೇಶದಲ್ಲಿ ಆನೆದಂತ ಸಿಕ್ಕಿದ್ದು, ಇದನ್ನು ಹನೂರು ಕಡೆ ಮಾರಾಟ ಮಾಡಲು ಹೋಗುತ್ತಿದ್ದೇವೆಂದು ಆರೋಪಿಗಳು ತನಿಖೆಯಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ. ನಂತರ ರಾಮಾಪುರ ಪೊಲೀಸ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಆಸ್ಪತ್ರೆಗೆ ಭೇಟಿ ನೀಡಿ ರೈತನ ಆರೋಗ್ಯ ವಿಚಾರಣೆ

**ಶಿರಾ:** ಜಮೀನು ತೆರವು ವಿರೋಧಿಸಿ ವಿಷ ಕುಡಿದ ರೈತರ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶಾಸಕ ಟಿ ಬಿ ಜಯಚಂದ್ರ.

ಶಿರಾನಗರಸಭೆ ವ್ಯಾಪ್ತಿಯ ಕಲ್ಲುಕೋಟೆಯಲ್ಲಿ ಸಾಗುವಳಿ ಮಾಡುತ್ತಿದ್ದ ಜಮೀನು ತೆರವುಗೊಳಿಸಿ ಆಶ್ರಯ ನಿವೇಶನ ನೀಡಲು ತಾಲ್ಲೂಕು ಆಡಳಿತ ಮುಂದಾಗಿದ್ದು, ಶನಿವಾರ ಜಮೀನು ತೆರವುಗೊಳಿಸಲು ಅಧಿಕಾರಿಗಳು ಸ್ಥಳಕ್ಕೆ ಹೋದ ಸಮಯದಲ್ಲಿ ರೈತರಾದ ಲಕ್ಷ್ಮಿಕಾಂತ್ ಹಾಗೂ ಮಾನಮ್ಮ ವಿಷ ಕುಡಿದು ವಿರೋಧ ವ್ಯಕ್ತಪಡಿಸಿದರು.



ಸಾಗುವಳಿ ಮಾಡುತ್ತಿದ್ದ ಜಮೀನು ನಗರಸಭೆ ವ್ಯಾಪ್ತಿಯಲ್ಲಿದ್ದು, ನಗರದಲ್ಲಿರುವ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಈ ಜಮೀನನ್ನು 2016ರಲ್ಲಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರ ಮಾಡಲಾಗಿತ್ತು.

'ಸಾಗುವಳಿ ಮಾಡುತ್ತಿದ್ದ ಜಮೀನು ಆಶ್ರಯ ನಿವೇಶನಕ್ಕೆ ಮೀಸಲಿರಿಸಿದ್ದು ಇದರ ಬದಲು ಬೇರೆ ಕಡೆ ಜಾಗ ತೋರಿಸಿ ನಮಗೆ ಜಮೀನು ಮಂಜೂರು ಮಾಡಿಕೊಡಿ ಈ ಜಾಗವನ್ನು ಬಿಟ್ಟುಕೊಡುತ್ತೇವೆ, ಇಲ್ಲದಿದ್ದರೆ ನಾವು ಬಿಟ್ಟುಕೊಡುವುದಿಲ್ಲ' ಎಂದು ರೈತರು ಪಟ್ಟು ಹಿಡಿದಿದ್ದರು.

ಶನಿವಾರ ತಹಶೀಲ್ದಾರ್ ಸಚ್ಚಿದಾನಂದ ಕುಚನೂರು, ಪೌರಾಯುಕ್ತ ರುದ್ರೇಶ್ ಸೇರಿದಂತೆ ಅಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ತೆರಳಿ ತೆರವುಗೊಳಿಸಲು ಮುಂದಾದಾಗ ಅಧಿಕಾರಿಗಳ ಮುಂದೆಯೇ ರೈತರು ವಿಷ ಸೇವಿಸಿದರು

ಸದ್ಯ ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಟಿ.ಬಿ.ಜಯಚಂದ್ರ ಅವರು ಭೇಟಿ ನೀಡಿ ವಿಷ ಸೇವನೆ ಮಾಡಿದ ಲಕ್ಷ್ಮಿಕಾಂತ್ ಅವರ ಆರೋಗ್ಯ ವಿಚಾರಿಸಿ ಶೀಘ್ರವಾಗಿ ಗುಣಮುಖವಾಗುವಂತೆ ಹಾರೈಸಿ ಚಿಕಿತ್ಸೆಯ ಸಂಪೂರ್ಣ ವೆಚ್ಚ ಭರಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಅಯುಕ್ತ ರುದ್ರೇಶ್ ಮತ್ತಿತರ ಇದ್ದರು.

# ಅಂಬಿಗರ ಚೌಡಯ್ಯ ಜಯಂತಿ ಪೂರ್ವಭಾವಿ ಸಭೆ

**ಕುಕನೂರು:** ಇದೇ ತಿಂಗಳು 21 ರಂದು ಶಿವ ಶರಣ ಅಂಬಿಗರ ಚೌಡಯ್ಯ ಜಯಂತಿ ಪ್ರಯುಕ್ತ ತಹಸೀಲ್ದಾರ್ ಕಚೇರಿಯಲ್ಲಿ ಗ್ರೇಡ್ 2 ತಹಸೀಲ್ದಾರ್ ಮುರಳೀಧರ ಕುಲಕರ್ಣಿ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ಇಂದು ನಡೆಯಿತು.

ಶರಣರ ಜೀವನ, ಸಿದ್ಧಾಂತಗಳನ್ನು ಇಂದಿನ ಪೀಳಿಗೆಗೆ ಪ್ರಚುರ ಪಡಿಸಲು ಮತ್ತು ಅವರನ್ನು ಸ್ಮರಿಸಲು ಸರ್ಕಾರದಿಂದ ಮಹಾಮಹಿಮರ ಜಯಂತಿ ಆಚರಿಸಲಾಗುತ್ತದೆ. ಎಲ್ಲರೂ ಭಾಗವಹಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಗಂಗಾಮತ ಸಮಾಜದ ಪ್ರಮುಖರಾದ ರಾಮು ಕೌದಿ ಮಾತನಾಡಿ, ಅದ್ದೂರಿ ಜಯಂತಿ ಆಚರಿಸಲು ಸರ್ಕಾರದಿಂದ ಇನ್ನೂ ಹೆಚ್ಚಿನ ಅನುದಾನ ಮತ್ತು ವಿವಿಧ ಇಲಾಖೆಗಳಿಂದ ಹೆಚ್ಚಿನ ಸಹಾಯ ಸಹಕಾರ ನೀಡಬೇಕು ಎಂದರು. 21 ರಂದು ಸಂಕೇತಿಕವಾಗಿ ಆಚರಣೆ ಮಾಡಿ ನಂತರ ಮುಂದಿನ ಫೆಬ್ರವರಿ ತಿಂಗಳಲ್ಲಿ ಅದ್ದೂರಿ ಜಯಂತಿ ಆಚರಿಸಲು ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶಿರಸ್ತೆದಾರ್ ಮಹಮ್ಮದ್ ಮುಸ್ತಫಾ,ಗಂಗಾಮತ ತಾಲೂಕು ಅಧ್ಯಕ್ಷ ಬುಡ್ಡಪ್ಪ ಬಾರಕೇರ, ಉಮೇಶ್ ದಳವಾಯಿ, ಬಾಳಪ್ಪ ಬಾರಕೇರ, ಮಂಜು ಕಲ್ಲೂರು, ಶಿವಪುತ್ರಪ್ಪ ಮಡ್ಡಿ, ಮಂಜುನಾಥ್ ಬಾರಕೇರ, ಗುದ್ನೇಪ್ಪ ಈಟಿ, ಪರಶುರಾಮ್ ಬಾರಕೇರ, ಶರಣಪ್ಪ ನಾಗರಾಳ್ ಇತರರು ಇದ್ದರು.



# ದೆಹಲಿ ವಿಧಾನಸಭಾ ಚುನಾವಣೆ: ಕೇಜ್ರಿವಾಲ್ ನಾಮಪತ್ರ ಸಲ್ಲಿಕೆ

**ನವದೆಹಲಿ:** ಎಎಪಿ ರಾಷ್ಟ್ರೀಯ ಸಂಚಾಲಕ ಮತ್ತು ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬುಧವಾರ ನವದೆಹಲಿ ವಿಧಾನಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಕೆ ಮಾಡಿದ್ದಾರೆ.

ಈ ನಾಮಪತ್ರ ಸಲ್ಲಿಕೆ ವೇಳೆ ರಾಜಧಾನಿಯ ಅನೇಕ ತಾಯಂದಿರು ಮತ್ತು ಸಹೋದರಿಯರು ಜೊತೆಯಾಗಲಿದ್ದು, ತಮಗೆ ಆಶೀರ್ವಾದ ಮಾಡಲಿದ್ದಾರೆ ಎಂದು ಅರವಿಂದ್ ಕೇಜ್ರಿವಾಲ್ ತಿಳಿಸಿದ್ದಾರೆ.

ನಾಮಪತ್ರ ಸಲ್ಲಿಕೆಗೆ ಮುನ್ನ ಅರವಿಂದ್ ಕೇಜ್ರಿವಾಲ್ ವಾಲ್ಮೀಕಿ ಮತ್ತು ಹನುಮಾನ್ ದೇಗುಲಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆಯಲಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, "ಇಂದು ನಾನು ಚುನಾವಣಾ ನಾಮಪತ್ರ ಸಲ್ಲಿಕೆ ಮಾಡುತ್ತಿದ್ದು, ಈ ಸಂದರ್ಭದಲ್ಲಿ ಅನೇಕ ತಾಯಂದಿರು ಮತ್ತು ಸಹೋದರಿಯರು ನನಗೆ ಆಶೀರ್ವದಿಸಲಿದ್ದಾರೆ. ಹಾಗೇ ಹನುಮಾನ್ ಮತ್ತು ವಾಲ್ಮೀಕಿ ದೇಗುಲಕ್ಕೆ ಭೇಟಿ ನೀಡುವುದಾಗಿ ಅವರು ತಿಳಿಸಿದರು.

ಕೇಜ್ರಿವಾಲ್ ವಿರುದ್ಧ ನವದೆಹಲಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಪ್ರವೇಶ್ ವರ್ಮಾ ಅವರು ಕಣಕ್ಕೆ ಇಳಿಯಲಿದ್ದಾರೆ. ಕಾಂಗ್ರೆಸ್‌ನಿಂದ ದೆಹಲಿ ಮಾಜಿ ಸಿಎಂ ಶೀಲಾ ದೀಕ್ಷಿತ್ ಪುತ್ರ ಸಂದೀಪ್ ದೀಕ್ಷಿತ್ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ.

2013ರಿಂದ ದೆಹಲಿಯಲ್ಲಿ ಅಧಿಕಾರ ಚುಕ್ಕಾಣಿ ಹಿಡಿದಿರುವ ಆಮ್ ಆದ್ಮಿ ಪಕ್ಷ, ಮೂರನೇ ಬಾರಿ



ಕೂಡ ಅಧಿಕಾರ ಗದ್ದುಗೆ ಏರುವ ಆಕಾಂಕ್ಷೆ ಹೊಂದಿದೆ. ಈ ನಡುವೆ ಇಡಿ ಸುಳಿ ಕೂಡ ಕೇಜ್ರಿವಾಲ್ ಅವರನ್ನು ಸುತ್ತಿಕೊಂಡಿದ್ದು, ಅವರು ನಾಮಪತ್ರ ಸಲ್ಲಿಸುವ ದಿನವೇ ಜಾಮೀನಿನ ಮೇಲೆ ಹೊರಗೆ ಇರುವ ಕೇಜ್ರಿವಾಲ್ ಅವರನ್ನು ಇಡಿ ವಿಚಾರಣೆಗೆ ಒಳಪಡಿಸಲು ಕೇಂದ್ರ ಗೃಹ ಸಚಿವಾಲಯ ಒಪ್ಪಿಗೆ ನೀಡಿದೆ. ಅಬಕಾರಿ ನೀತಿ ಹಗರಣದಲ್ಲಿ ಈಗಾಗಲೇ ಆರು ತಿಂಗಳ ಸೆರೆವಾಸ ಅನುಭವಿಸಿರುವ ಕೇಜ್ರಿವಾಲ್ ಜಾಮೀನಿನ ಮೇಲೆ ಹೊರಗಿದ್ದಾರೆ.

ಬಿಜೆಪಿ ಅಭ್ಯರ್ಥಿಯಿಂದ ನಾಮಪತ್ರ ಸಲ್ಲಿಕೆ: ಇನ್ನು ನವದೆಹಲಿ ವಿಧಾನಸಭಾ ಕ್ಷೇತ್ರದಿಂದ ಕೇಜ್ರಿವಾಲ್ ವಿರುದ್ಧ ಕಣಕ್ಕೆ ಇಳಿದಿರುವ ದೆಹಲಿ ಮಾಜಿ ಸಂಸದ ಪ್ರವೇಶ್ ವರ್ಮಾ ಕೂಡ ಇಂದು ನಾಮಪತ್ರ ಸಲ್ಲಿಕೆ ಮಾಡಿದರು. ಇಂದು ಬೆಳಗ್ಗೆ ಬೃಹತ್ ಬೆಂಬಲಿಗರೊಂದಿಗೆ ಗೌರಿ ಶಂಕ ದೇಗುಲಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಬೃಹತ್ ರೋಡ್‌ಶೋ ಮೂಲಕ ಆಗಮಿಸಿದ ಅವರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚುನಾವಣಾ ನಾಮಪತ್ರ ಸಲ್ಲಿಕೆ ಮಾಡಿದರು.

70 ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ದೆಹಲಿ ಚುನಾವಣೆಯ ಮತದಾನವೂ ಫೆ. 5ಕ್ಕೆ ನಿಗದಿಯಾಗಿದ್ದು, ಫೆ. 8ರಂದು ಮತದಾನ ಹೊರ ಬೀಳಲಿದೆ.

## ಕೇಜ್ರಿ ವಿರುದ್ಧ ಇಡಿ ವಿಚಾರಣೆಗೆ ಕೇಂದ್ರ ಅಸ್ತು

ನವದೆಹಲಿ: ಅಬಕಾರಿ ನೀತಿಯಲ್ಲಿನ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮಾಜಿ ಸಿಎಂ, ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಲು ಕೇಂದ್ರ ಗೃಹ ಸಚಿವಾಲಯ ಅನುಮತಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣ ಸಂಬಂಧ ಕಳೆದ ವ?ರ್ ಮಾರ್ಚ್‌ನಲ್ಲಿ ಕೇಜ್ರಿವಾಲ್ ವಿರುದ್ಧ ವಿಶೇ? ಪಿಎಲ್ಎ ನ್ಯಾಯಾಲಯಕ್ಕೆ ಇಡಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿತ್ತು. ಇದೀಗ ದೆಹಲಿ ಚುನಾವಣೆ ಹೊತ್ತಲ್ಲಿ ಕೇಂದ್ರ ಗೃಹ ಸಚಿವಾಲಯವು ಕಾನೂನು ಪ್ರಕಾರ ಜಾರಿ ನಿರ್ದೇಶನಾಲಯಕ್ಕೆ ತನಿಖೆಗೆ ಒಪ್ಪಿಗೆ ನೀಡಿದೆ.

ಪ್ರಕರಣದಲ್ಲಿ ಕೇಜ್ರಿವಾಲ್ ಅವರನ್ನು ಆರೋಪಿಯನ್ನಾಗಿ ಮಾಡಲಾಗಿದ್ದು, ಮಾಜಿ ಮುಖ್ಯಮಂತ್ರಿ ಈ ಹಗರಣದ ಪ್ರಮುಖ ಆರೋಪಿ ಎಂದು ಇಡಿ ದೂರಿದೆ. ಅಲ್ಲದೆ ಕೇಜ್ರಿವಾಲ್ ತಮ್ಮ ಸರ್ಕಾರದ ಇತರೆ ಸಚಿವರು, ಎಎಪಿ ನಾಯಕರು ಮತ್ತು ಇತರರೊಂದಿಗೆ ಶಾಮೀಲಾಗಿದ್ದಾರೆ ಎಂದು ಪ್ರಕರಣದಲ್ಲಿ ಆರೋಪಿಸಲಾಗಿದೆ.

ಎಎಪಿ ರಾಜಕೀಯ ಪಕ್ಷವಾಗಿದ್ದು, ಇದನ್ನು ಪ್ರಜಾಪ್ರತಿನಿಧಿ ಕಾಯ್ದೆಯಡಿಯಲ್ಲಿ ಭಾರತದ ವೈಯಕ್ತಿಕ ನಾಗರಿಕರ ಸಂಘ ಅಥವಾ ಸಂಸ್ಥೆ ಎಂದು ಇಡಿ ಈ ಮೊದಲು ವ್ಯಾಖ್ಯಾನಿಸಿತ್ತು. ಇದರಿಂದ ಪಿಎಂಎಲ್ಎ ಸೆಕ್ಷನ್ 70ರ ಅಡಿಯಲ್ಲಿ ಇದನ್ನು ಕಂಪನಿ ಎಂದು ವರ್ಗೀಕರಿಸಬಹುದು ಎಂದು ತಿಳಿಸಿತು.

ಲೆಫ್ಟಿನೆಂಟ್ ಗವರ್ನರ್ ವಿಕೆ ಸಕ್ಸೆನಾ ಕೂಡ ಕಳೆದ ತಿಂಗಳು ಕೇಜ್ರಿವಾಲ್ ವಿರುದ್ಧದ ತನಿಖೆಗೆ ಅನುಮತಿ ನೀಡಿದ್ದರು. ಗೋವಾ ಚುನಾವಣಾ ಪ್ರಚಾರಕ್ಕಾಗಿ ಕೆಲವು ಮಧ್ಯದ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಳ್ಳಲು ಲಂಚ ತೆಗೆದುಕೊಳ್ಳಲಾಗಿದೆ ಎಂಬ ಆರೋಪ ಕೂಡ ಪಟ್ಟಿಯಲ್ಲಿದೆ. ಈ ಹಗರಣದಲ್ಲಿ ಎಎಪಿ ಪಕ್ಷದ ರಾಷ್ಟ್ರೀಯ ಸಂಚಾಲಕ ಕೇಜ್ರಿವಾಲ್ ಜವಾಬ್ದಾರರು ಎಂದು ತಿಳಿಸಿದೆ.

# ಅಮೆರಿಕ ಕಾನ್ಸುಲೇಟ್ ಕಚೇರಿ ಆರಂಭ

**ನವದೆಹಲಿ:** ಬೆಂಗಳೂರಿಗರ ಬಹು ಬೇಡಿಕೆಯ ಅಮೆರಿಕ ಕಾನ್ಸುಲೇಟ್ ಕಚೇರಿಗೆ ಈಗಾಗಲೇ ಹಸಿರು ನಿಶಾನೆ ಸಿಕ್ಕಿದ್ದು, ನಾಳೆಯಿಂದ ಆರಂಭವಾಗಲಿದೆ. ಈ ಕಾರ್ಯ ಸಾಧ್ಯವಾಗುವಲ್ಲಿ ಕೇಂದ್ರ ಸರ್ಕಾರ ಹಾಗೂ ವಿದೇಶಾಂಗ ಸಚಿವ ಜೈ ಶಂಕರ್ ಪಾತ್ರವೂ ಇದೆ. ಈ ಹಿನ್ನೆಲೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಮೈಸೂರು ಪಾಕ್ ನೀಡಿ ಕೇಂದ್ರ ಸಚಿವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಇನ್ನು ಬೆಂಗಳೂರಿನಲ್ಲಿ ಯಾವ ಸ್ಥಳದಲ್ಲಿ ಈ ಕಚೇರಿಯಾಗಲಿದೆ ಎಂಬುದು ನಿರ್ಧಾರವಾಗಿಲ್ಲ. ಆದರೆ, ಕಚೇರಿ ಆರಂಭದ ಸಾಂಪ್ರದಾಯಿಕ ಕಾರ್ಯಕ್ರಮವೂ ನಾಳೆ ಅಂದರೆ ಜನವರಿ 17ರಂದು ವಿಠಲ್ ಮಲ್ಯ ರಸ್ತೆಯ ಜೆಡಬ್ಲ್ಯೂ ಮೆರಿಯೇಟ್ ಹೋಟೆಲ್‌ನಲ್ಲಿ ನಡೆಯಲಿದೆ. ಅಮೆರಿಕದ ಭಾರತ ರಾಯಭಾರಿ ಎರಿಕ್ ಗರ್ಸೆಟ್ಟಿ ಮತ್ತು ಅವರ ಉನ್ನತ ಮಟ್ಟದ ನಿಯೋಗ, ಪ್ರಮುಖ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಈ ಹಿನ್ನೆಲೆ ಬುಧವಾರ ವಿದೇಶಾಂಗ ಸಚಿವ ಜೈ ಶಂಕರ್ ಅವರನ್ನು ಸಂಸದ ತೇಜಸ್ವಿ ಸೂರ್ಯ ಭೇಟಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಈ ವೇಳೆ ಇದು ಸಾಧ್ಯವಾಗಿದ್ದು ಪ್ರಧಾನಿ ನರೇಂದ್ರ ಮೋದಿ ಹಾಗೂ ವಿದೇಶಾಂಗ ಸಚಿವ ಎಸ್ ಜೈ ಶಂಕರ್ ಅವರ ಪ್ರಯತ್ನದಿಂದ. ನಮ್ಮ ನಾಡಿನ ಸಿಹಿ ಮೈಸೂರು ಪಾಕ್ ನೀಡಿ ಅವರಿಗೆ ಕೃತ್ಯಜ್ಞತೆ ಸಲ್ಲಿಸುವುದಕ್ಕಿಂತ ಉತ್ತಮ ಮಾರ್ಗವಿಲ್ಲ ಎಂದು ತೇಜಸ್ವಿ ಸೂರ್ಯ ವಿದೇಶಾಂಗ ಸಚಿವರಿಗೆ ಸಿಹಿ ಹಂಚುತ್ತಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಇದೇ ವೇಳೆ ಮುಂದುವರೆದು ವಿಡಿಯೋದಲ್ಲಿ ಮಾತನಾಡಿರುವ ಸೂರ್ಯ, ಬೆಂಗಳೂರಿನಲ್ಲಿ ಯುಎಸ್ ಕಾನ್ಸುಲೇಟ್ ಕಚೇರಿ ಸ್ಥಾಪನೆಯಾಗುವುದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ನಗರವೂ ಈಗಾಗಲೇ ದೇಶದ ಐಟಿ ರಾಜಧಾನಿಯಾಗಿ ಗುರುತಿಸಿಕೊಂಡಿದ್ದು, ಅನೇಕ ಮಲ್ಟಿನ್ಯಾ?ನಲ್ ಕಂಪನಿಗಳು ಇಲ್ಲಿವೆ. ಕಾನ್ಸುಲೇಟ್ ಕಚೇರಿ ಆರಂಭದಿಂದ ಎರಡು ದೇಶಗಳ ನಡುವಿನ ವಾಣಿಜ್ಯ ಮತ್ತು ವ್ಯಾಪಾರಕ್ಕೆ ಉತ್ತೇಜನ ಸಿಗುತ್ತದೆ. ಹಾಗೇ ಉದ್ಯಮಿಗಳಿಗೆ ಪ್ರಯಾಣವೂ ಸರಾಗವಾಗುತ್ತದೆ, ಈ ಬಹುಕಾಲದ ಬೇಡಿಕೆಯನ್ನು ಈಡೇರಿಸಿದ್ದಕ್ಕಾಗಿ ಮೋದಿ ಸರ್ಕಾರಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದಿದ್ದಾರೆ.

ತೇಜಸ್ವಿ ಸೂರ್ಯ ಬೆಂಗಳೂರಿನಲ್ಲಿ ಯುಎಸ್ ಕಾನ್ಸುಲೇಟ್ ಕಚೇರಿ ಆರಂಭಕ್ಕೆ ಮನವಿ ಮಾಡಿದ್ದರು. ಅವರು ಈ ಬಗ್ಗೆ ಬಲವಾಗಿ ಪದೇ ಪದೇ ಪ್ರಯತ್ನ ಮಾಡುತ್ತಿದ್ದ ಹಿನ್ನಲೆ ನಾನು ಮುಂದಿನ ಬಾರಿ ಯುಎಸ್ ರಾಜ್ಯ ಕಾರ್ಯದರ್ಶಿ ಅಂಥೋನಿ ಬ್ಲಿಂಕೆನ್ ಅವರನ್ನು ಭೇಟಿಯಾದಾಗ ಈ ಕುರಿತು ಮಾತಾಡಿರುವ ಭರವಸೆ ನೀಡಿದ್ದೆ. ಅದು ಈಗ ಸಾಧ್ಯವಾಗಿದೆ ಎಂದರು.

ಬೆಂಗಳೂರಿನಲ್ಲಿ ಯುಎಸ್ ಕಾನ್ಸುಲೇಟ್ ಕಚೇರಿ ಸ್ಥಾಪನೆಗೆ ತೇಜಸ್ವಿ ಸೂರ್ಯ 2019ರ ನವೆಂಬರ್‌ನಲ್ಲಿ ಜೈ ಶಂಕರ್ ಅವರನ್ನು ಭೇಟಿಯಾಗಿ ಲಿಖಿತ ಮನವಿ ನೀಡಿದ್ದರು.

# ಸದ್ದು ಮಾಡಿದ್ದ ಹಿಂಡನ್‌ಬರ್ಗ್ ರಿಸರ್ಚ್ ಸ್ಥಗಿತ: ಸಂಸ್ಥಾಪಕರಿಂದ ಘೋಷಣೆ

**ನವದೆಹಲಿ:** ಜಗತ್ತಿನ ಪ್ರಮುಖ ಕಾರ್ಪೊರೇಟರ್ ಗುರಿಯಾಗಿಸಿ ವರದಿ ಮಾಡಿ, ಆರ್ಥಿಕ ತಲ್ಲಣಕ್ಕೆ ಕಾರಣವಾಗಿ ಸದ್ದು ಮಾಡಿದ್ದ ಹಿಂಡನ್ ಬರ್ಗ್ ಸಂಶೋಧನಾ ಘಟಕವನ್ನು ಮುಚ್ಚುವುದಾಗಿ ಅದರ ಸಂಸ್ಥಾಪಕ ನಾಟೆ ಆ್ಯಂಡರ್ಸನ್ ಘೋಷಿಸಿದ್ದಾರೆ.

ಅಮೆರಿಕ ಮೂಲದ ಸಣ್ಣ ಮಾರಾಟ ಘಟಕವಾಗಿರುವ ಹಿಂಡನ್ ಬರ್ಗ್ ಅನ್ನು ವಿಸರ್ಜಿಸಲಾಗುತ್ತಿದ್ದು, ಈ ನಿರ್ಧಾರಕ್ಕೆ ನಿರ್ದಿ?ಷ್ಟ ಕಾರಣ ಇಲ್ಲ. ಯಾವುದೇ ಬೆದರಿಕೆ, ಯಾವುದೇ ಆರೋಗ್ಯ ಸಮಸ್ಯೆ ಮತ್ತು ಯಾವುದೇ ದೊಡ್ಡ ವೈಯಕ್ತಿಕ ಸಮಸ್ಯೆಯೂ ಇಲ್ಲ ಎಂಬುದನ್ನು ಸಂಸ್ಥಾಪಕರು ಸ್ಪ?ಷ್ಟಪಡಿಸಿದ್ದಾರೆ.

ಭಾರತ ಸೇರಿದಂತೆ ಜಗತ್ತಿನ ಅನೇಕ ಕಾರ್ಪೊರೇಟ್ ಉದ್ಯೋಗಿಗಳ ಕುರಿತು ಹಿಂಡನ್ ಬರ್ಗ್ ಮಾಡಿದ ವರದಿ ಆರ್ಥಿಕ ಸಂದಿಗ್ಧತೆಗೂ ಕೂಡ ಕಾರಣವಾಗಿತ್ತು.

ಸಂಸ್ಥೆ ಮುಚ್ಚುವ ಕುರಿತು ತಮ್ಮ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಿರುವ ಆ್ಯಂಡರ್ಸನ್, ಜಗತ್ತಿನಲ್ಲಿ ಅನೇಕ ವಿಚಾರಗಳನ್ನು ಹಾಗೂ ನಾನು ಕಾಳಜಿ ವಹಿಸುವ ವ್ಯಕ್ತಿಗಳನ್ನು ನಾನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ನನ್ನ ಜೀವನದಲ್ಲಿ ಹಿಂಡನ್ ಬರ್ಗ್ ಅಧ್ಯಯನದ ಬಗ್ಗೆ ತಿಳಿದಿದೆ. ಆದರೆ, ಕೇಂದ್ರಿಕೃತ ವಿಚಾರಗಳು ಇವುಗಳನ್ನು ವ್ಯಾಖ್ಯಾನಿಸುವುದಿಲ್ಲ ಎಂದಿದ್ದಾರೆ.

ನನ್ನ ಕುಟುಂಬ ಹಾಗೂ ತಂಡದೊಂದಿಗೆ ಕಳೆದ ವ?ರ್ಾಂತ್ಯದಲ್ಲಿಯೇ ಈ ಕುರಿತು ನಾನು ಚರ್ಚಿಸಿದ್ದೆ. ನಾನು ಯೋಚಿಸಿರುವ ಕೆಲವು ವಿಚಾರಗಳು ಒಂದು ಹಂತಕ್ಕೆ ಬಂದ ಮೇಲೆ ಇದನ್ನು ಮುಚ್ಚುವುದಕ್ಕೆ ನಿರ್ಧರಿಸಿದ್ದೆ. ಅಂತಿಮ ವಿಚಾರಗಳು ಪೂರ್ಣಗೊಂಡಿದ್ದು, ನಿಯಾಮವಳಿಗಳಂತೆ ಇಂದು ಈ ಕುರಿತು ಹಂಚಿಕೊಳ್ಳಲಾಗುತ್ತಿದೆ ಎಂದು ಬರೆದುಕೊಂಡಿದ್ದಾರೆ.

ಮುಂದುವರೆದು ಮಾತನಾಡಿರುವ ಅವರು, ನಮ್ಮ ತಂಡದಲ್ಲಿರುವ ಪ್ರತಿಯೊಬ್ಬರು ಮುಂದೆ ತಮ್ಮ?ದಂತೆ ಎಲ್ಲಿರಬೇಕು ಎಂದು ನಿರ್ಧರಿಸುತ್ತಾರೆಯೋ ಅದಕ್ಕೆ ಸಹಕಾರ ನೀಡಿ ಗಮನ ಹರಿಸಲಾಗುವುದು. ಕೆಲವರು ತಮ್ಮದೇ ಸ್ವಂತ ಸಂಶೋಧನಾ ಘಟನೆ ಸ್ಥಾಪಿಸಬೇಕು ಎಂದಿದ್ದಾರೆ. ಇದರಲ್ಲಿ ನಾನು ವೈಯಕ್ತಿಕವಾಗಿ ತೊಡಗಿಕೊಳ್ಳದಿದ್ದರೂ ದೃಢವಾಗಿ ಮತ್ತು ಸಾರ್ವಜನಿಕವಾಗಿ ಅವರಿಗೆ ಪ್ರೋತ್ಸಾಹ ನೀಡುತ್ತೇನೆ. ಮತ್ತೆ ಕೆಲವರು ಸ್ವತಂತ್ರ ಏಜೆಂಟ್ ಆಗಿ ಕಾರ್ಯ ನಿರ್ವಹಿಸಬೇಕು ಎಂದಿದ್ದಾರೆ. ಅವರು ಅಗತ್ಯವಿದ್ದಲ್ಲಿ ಮುಕ್ತವಾಗಿ ನನ್ನನ್ನು ಸಂಪರ್ಕಿಸಬಹುದು ಎಂದಿದ್ದಾರೆ.


ಮುಂದಿನ ಆರು ತಿಂಗಳು ಅಥವಾ ಅದಕ್ಕೂ ಹೆಚ್ಚಿನ ಸಮಯದಲ್ಲಿ ನಾವು ನಮ್ಮ ತನಿಖೆಯನ್ನು ಹೇಗೆ ಮಾಡುತ್ತಿದ್ದೇವು ಮತ್ತು ನಮ್ಮ ಮಾದರಿಯ ಎಲ್ಲಾ ಮುಕ್ತ ಮೂಲಗಳ ಕುರಿತು ವಿಡಿಯೋಗಳ ಕುರಿತು ಸರಣಿಯಲ್ಲಿ ಕಾರ್ಯ ನಿರ್ವಹಿಸುವ ಯೋಜನೆಯನ್ನು ಆ್ಯಂಡರ್ಸನ್ ಹೊಂದಿದ್ದಾರೆ.

# ಭಾರತ ಸರ್ಕಾರದ ಕ್ಷಮೆಯಾಚಿಸಿದ ಮೆಟಾ

ನವದೆಹಲಿ: 2024ರ ಸಾರ್ವತ್ರಿಕ ಚುನಾವಣೆ ಕುರಿತು ತನ್ನ ಸಹ – ಸಂಸ್ಥಾಪಕ ಹಾಗೂ ಸಿಇಒ ಮಾರ್ಕ್ ಜುಕರ್ ಬರ್ಗ್ ನೀಡಿದ ಹೇಳಿಕೆಗೆ ಸಾಮಾಜಿಕ ಮಾಧ್ಯಮ ದೈತ್ಯ ಮೆಟಾ ಬುಧವಾರ ಭಾರತ ಸರಕಾರದ ಕ್ಷಮೆಯಾಚಿಸಿದೆ. ಜುಕರ್ ಬರ್ಗ್ ಅವರ ಹೇಳಿಕೆ ಅಜಾಗರೂಕತನದಿಂದಾದ ತಪ್ಪು ಮತ್ತು ಭಾರತವು ಕಂಪನಿಯ ದೃಷ್ಟಿಕೋನದಲ್ಲಿ ಪ್ರಮುಖ ರಾಷ್ಟ್ರವಾಗಿ ಮುಂದುವರಿಯಲಿದೆ ಎಂದು ಮೆಟಾ ಹೇಳಿದೆ.

ಕಂಪನಿಯ ಸ್ಥಾಪಕ ಜುಕರ್ ಬರ್ಗ್ ಅವರ ತಪ್ಪು ಮತ್ತು ಬೇಜವಾಬ್ದಾರಿಯುತ ಹೇಳಿಕೆಗಳಿಗಾಗಿ ಮತ್ತು ತಪ್ಪು ಮಾಹಿತಿಯನ್ನು ಹರಡಿದ್ದಕ್ಕಾಗಿ ಸಂಸದೀಯ ಸಮಿತಿಯು ಕಂಪನಿಗೆ ಸಮನ್ಸ್ ನೀಡಲು ಸಜ್ಜಾಗಿರುವ ಮಧ್ಯೆ ಮೆಟಾ ಭಾರತ ಸರ್ಕಾರದ ಕ್ಷಮೆಯಾಚಿಸಿರುವುದು ಗಮನಾರ್ಹ.

"ಹಿಂದೆ ಅಧಿಕಾರದಲ್ಲಿರುವ ಪಕ್ಷಗಳು 2024ರ ಚುನಾವಣೆಯಲ್ಲಿ ಮರು ಆಯ್ಕೆಯಾಗಿಲ್ಲ ಎಂಬ ಮಾರ್ಕ್ ಅವರ ಅವಲೋಕನವು ವಿಶ್ವದ ಇತರ ದೇಶಗಳಿಗೆ ಅನ್ವಯಿಸುತ್ತದೆ, ಆದರೆ ಭಾರತಕ್ಕಲ್ಲ" ಎಂದು



ಮೆಟಾ ಇಂಡಿಯಾ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

"ಈ ಅಜಾಗರೂಕ ತಪ್ಪಿಗೆ ನಾವು ಕ್ಷಮೆಯಾಚಿಸುತ್ತಿದ್ದೇವೆ. ಭಾರತವು ಮೆಟಾ ಪಾಲಿಗೆ ಅತ್ಯಂತ ಪ್ರಮುಖ ದೇಶವಾಗಿ ಮುಂದುವರೆದಿದೆ ಮತ್ತು ಅದರ ಹೊಸ ಭವಿಷ್ಯದ ಹೃದಯಭಾಗದಲ್ಲಿರಲು ನಾವು ಬಯಸುತ್ತೇವೆ" ಎಂದು ಕಂಪನಿ ಹೇಳಿದೆ.

ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ಬಹುತೇಕ ರಾಷ್ಟ್ರಗಳಲ್ಲಿನ ಆಡಳಿತಾರೂಢ ಸರ್ಕಾರಗಳು ಸಾರ್ವಜನಿಕರ ನಂಬಿಕೆಯನ್ನು ಕಳೆದುಕೊಂಡವು ಮತ್ತು ಅಂತಿಮವಾಗಿ 2024ರ ಚುನಾವಣೆಗಳಲ್ಲಿ ಅಂಥ ಸರ್ಕಾರಗಳು ಅಧಿಕಾರ ಕಳೆದುಕೊಂಡವು ಎಂದು ಜುಕರ್ ಬರ್ಗ್ ಇತ್ತೀಚೆಗೆ ಪಾಡ್ ಕಾಸ್ಟ್ ಒಂದರಲ್ಲಿ ಹೇಳಿರುವುದು ಭಾರತವನ್ನು ಕೆರಳಿಸಿದೆ.

ಭಾರತದ ಚುನಾವಣೆಗಳ ಬಗ್ಗೆ ಮಾರ್ಕ್ ಜುಕರ್ ಬರ್ಗ್ ಅವರ ಹೇಳಿಕೆಯನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಮತ್ತು ವಿದ್ಯುನ್ಮಾನ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಖಂಡಿಸಿದ್ದಾರೆ. ಜುಕರ್ ಬರ್ಗ್ ಅವರ ಹೇಳಿಕೆಯನ್ನು ಒರೆಗೆ ಹಚ್ಚಿದ ಅವರು, ವಾಸ್ತವದಲ್ಲಿ ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಭಾರತೀಯರು ಪ್ರಧಾನಿ ಮೋದಿ ನೇತೃತ್ವದ ಎನ್ ಡಿಎ ಸರ್ಕಾರದ ಮೇಲೆ ದಾಖಲೆಯ ಮೂರನೇ ಬಾರಿಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದಿದ್ದಾರೆ.

ಇದೇ ವಿಚಾರವಾಗಿ ಮಾತನಾಡಿದ ಬಿಜೆಪಿ ಸಂಸದ ಮತ್ತು ಸಂವಹನ ಮತ್ತು ಮಾಹಿತಿ ತಂತ್ರಜ್ಞಾನದ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷ ನಿಶಿಕಾಂತ್ ದುಬೆ, ತಪ್ಪು ಮಾಹಿತಿಯನ್ನು ಹರಡಿದ್ದಕ್ಕಾಗಿ ತಮ್ಮ ನೇತೃತ್ವದ ಸಂಸದೀಯ ಸಮಿತಿಯು ಶೀಘ್ರದಲ್ಲೇ ಮೆಟಾಗೆ ನೋಟಿಸ್ ನೀಡಲಿದೆ ಮತ್ತು ಕ್ಷಮೆಯಾಚಿಸುವಂತೆ ತಿಳಿಸಲಿದೆ ಎಂದು ಹೇಳಿದ್ದರು.

# ವಿಶ್ವದ ಪ್ರಮುಖ ಕಡಲ ಶಕ್ತಿಯಾಗುವತ್ತ ಭಾರತ ದಾಪುಗಾಲು

**ಮಹಾರಾಷ್ಟ್ರ:** ಜಾಗತಿಕ ಭದ್ರತೆ, ಆರ್ಥಿಕತೆ ಮತ್ತು ಭೌಗೋಳಿಕ ರಾಜಕೀಯ ಚಲನಶೀಲತೆಯ ದಿಕ್ಕು ನಿರ್ಧರಿಸುವಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬುಧವಾರ ಇಲ್ಲಿ ಮೂರು ನೌಕಾ ಯುದ್ಧನೌಕೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿ ಮಾತನಾಡಿದ ಅವರು, ಇಂಡೋ–ಪೆಸಿಫಿಕ್ ಪ್ರದೇಶವು ಯಾವಾಗಲೂ ಮುಕ್ತ, ಸುರಕ್ಷಿತ, ಅಂತರ್ಗತ ಮತ್ತು ಸಮೃದ್ಧವಾಗಿರಬೇಕೆಂದು ಭಾರತ ಬಯಸುತ್ತದೆ ಎಂದು ಮೋದಿ ಹೇಳಿದರು.



ವಿಧ್ವಂಸಕ ನೌಕೆ, ಯುದ್ಧನೌಕೆ ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಬುಧವಾರ ಮೊದಲ ಬಾರಿಗೆ ಒಟ್ಟಿಗೆ ನಿಯೋಜಿಸಿದ ನಂತರ ಮಾತನಾಡಿದ ಅವರು, ಈ ಮೂರೂ ಯುದ್ಧ ನೌಕೆಗಳು 'ಮೇಡ್ ಇನ್ ಇಂಡಿಯಾ' ಆಗಿವೆ ಎಂದು ಹೇಳಿದರು. 'ಆತ್ಮನಿರ್ಭರ ಭಾರತ್' ಉಪಕ್ರಮವು ದೇಶವನ್ನು ಬಲಪಡಿಸಿದೆ ಮತ್ತು ಸ್ವಾವಲಂಬಿಯನ್ನಾಗಿ ಮಾಡಿದೆ. ಭಾರತವು ಪ್ರಮುಖ ಕಡಲ ಶಕ್ತಿಯಾಗುತ್ತಿದೆ ಮತ್ತು ವಿಶ್ವದ ವಿಶ್ವಾಸಾರ್ಹ ಮತ್ತು ಜವಾಬ್ದಾರಿಯುತ ಪಾಲುದಾರನಾಗಿ ಗುರುತಿಸಲ್ಪಟ್ಟಿದೆ ಎಂದು ಅವರು ನುಡಿದರು.

"ಕಡಲನ್ನು ಮಾದಕವಸ್ತುಗಳು, ಶಸ್ತ್ರಾಸ್ತ್ರಗಳು ಮತ್ತು ಭಯೋತ್ಪಾದನೆಯಿಂದ ಮುಕ್ತಗೊಳಿಸುವ ಪ್ರಯತ್ನಗಳಲ್ಲಿ ನಾವು ಜಾಗತಿಕ ಪಾಲುದಾರರಾಗಬೇಕಿದೆ. ಅಲ್ಲದೇ ಕಡಲನ್ನು ಸುರಕ್ಷಿತ ಮತ್ತು ಸಮೃದ್ಧವಾಗಿಸಬೇಕಿದೆ. ಭಾರತವು ಪ್ರಮುಖ ಕಡಲ ಶಕ್ತಿಯಾಗುತ್ತಿದೆ ಮತ್ತು ವಿಶ್ವಾಸಾರ್ಹ ಮತ್ತು ಜವಾಬ್ದಾರಿಯುತ ಪಾಲುದಾರನಾಗಿ ಗುರುತಿಸಲ್ಪಟ್ಟಿದೆ" ಎಂದು ಅವರು ಹೇಳಿದರು.

"ಹಿಂದೂ ಮಹಾಸಾಗರ ಪ್ರದೇಶದಲ್ಲಿ ಎದುರಾಗುವ ಯಾವುದೇ ಆಪತ್ತು ಅಥವಾ ಬಿಕ್ಕಟ್ಟಿಗೆ ಭಾರತವೇ ಮೊದಲ ಪ್ರತಿಕ್ರಿಯೆ ನೀಡುವ ಶಕ್ತಿಯಾಗಿ ಹೊರಹೊಮ್ಮಿದೆ. ಜಾಗತಿಕ ಭದ್ರತೆ, ಆರ್ಥಿಕತೆ ಮತ್ತು ಭೌಗೋಳಿಕ ರಾಜಕೀಯಕ್ಕೆ ನಿರ್ದೇಶನ ನೀಡುವಲ್ಲಿ ಭಾರತ ಪ್ರಮುಖ ಪಾತ್ರ ವಹಿಸಲಿದೆ" ಎಂದು ಮೋದಿ ಹೇಳಿದರು.

"ಪ್ರಾದೇಶಿಕ ಜಲಪ್ರದೇಶ, ನೌಕಾಯಾನದ ಸ್ವಾತಂತ್ರ್ಯ ಮತ್ತು ವ್ಯಾಪಾರ ಸರಬರಾಜು ಮಾರ್ಗಗಳು ಮತ್ತು ಸಮುದ್ರ ಮಾರ್ಗಗಳನ್ನು ಭದ್ರಪಡಿಸುವುದು ಮುಖ್ಯ. ಭಾರತವು ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆಯೇ ಹೊರತು ವಿಸ್ತರಣಾವಾದಕ್ಕಾಗಿ ಅಲ್ಲ. ಕಳೆದ 10 ವ?ರ್ಗಳಲ್ಲಿ 33 ಹಡಗುಗಳು ಮತ್ತು ಏಳು ಜಲಾಂತರ್ಗಾಮಿ ನೌಕೆಗಳನ್ನು ನೌಕಾಪಡೆಗೆ ಸೇರಿಸಲಾಗಿದೆ" ಎಂದು ಅವರು ಹೇಳಿದರು.

ಭಾರತದ ರಕ್ಷಣಾ ಉತ್ಪಾದನೆ 1.25 ಲಕ್ಷ ಕೋಟಿ ರೂ.ಗಳನ್ನು ದಾಟಿದೆ ಮತ್ತು ಭಾರತದಿಂದ 100 ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಉಪಕರಣಗಳನ್ನು ರಫ್ತು ಮಾಡಲಾಗಿದೆ ಎಂದು ಅವರು ತಿಳಿಸಿದರು. ಮೂರು ಪ್ರಮುಖ ನೌಕಾ ಯುದ್ಧ ವಿಮಾನಗಳನ್ನು ನಿಯೋಜಿಸುವುದು ರಕ್ಷಣಾ ಉತ್ಪಾದನೆ ಮತ್ತು ಕಡಲ ಭದ್ರತೆಯಲ್ಲಿ ಜಾಗತಿಕ ನಾಯಕನಾಗುವ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಮುನ್ನಡೆಯನ್ನು ಸೂಚಿಸುತ್ತದೆ.

# ಹಮಾಸ್–ಇಸ್ರೇಲ್ ಕದನ ವಿರಾಮ, ಒತ್ತೆಯಾಳುಗಳ ಬಿಡುಗಡೆ ಒಪ್ಪಂದ

**ದೋಹಾ:** ಕಳೆದೊಂದು ವರ್ಷದಿಂದ ಸಾಗುತ್ತಿರುವ ಗಾಜಾ ಮತ್ತು ಇಸ್ರೇಲ್ ಯುದ್ಧ ನಿಲ್ಲುವ ಭರವಸೆ ಮೂಡಿದೆ. ಹಮಾಸ್ ಮತ್ತು ಇಸ್ರೇಲ್ ನಡುವಿನ ಕದನ ವಿರಾಮ ಹಾಗೂ ಒತ್ತೆಯಾಳುಗಳ ಬಿಡುಗಡೆ ಕುರಿತು ಕತಾರ್ ಮತ್ತು ಅಮೆರಿಕ ಘೋಷಣೆ ಮಾಡಿವೆ. ಈ ಕುರಿತು ನಡೆದ ಒಪ್ಪಂದದಲ್ಲಿ ಈ ನಿರ್ಣಯಕ್ಕೆ ಬರಲಾಗಿದೆ. ಆದರೆ, ಈ ಕುರಿತು ಅಂತಿಮ ಮಾತುಕತೆ ಬಾಕಿ ಇದ್ದು, ಈ ಸಂಬಂಧ ಕಾರ್ಯ ನಿರ್ವಹಿಸಲಾಗುವುದು ಎಂದು ಕೂಡ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ತಿಳಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಮತ್ತು ಚುನಾಯಿತ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಜೊತೆಗೆ ಬುಧವಾರ ನೇತನ್ಯಾಹು ಮಾತನಾಡಿದ್ದು, ಭದ್ರತಾ ಒಪ್ಪಂದಕ್ಕೆ ಸಹಾಯ ಮಾಡಿದ್ದಕ್ಕೆ ಧನ್ಯವಾದವನ್ನು ಸಲ್ಲಿಸಿದ್ದಾರೆ. ಈ ಒಪ್ಪಂದದಲ್ಲಿ ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಕೂಡ ಪ್ರಮುಖ ಪಾತ್ರ ಹೊಂದಿದ್ದು, 2023ರ ಅಕ್ಟೋಬರ್ 7ರಿಂದ ಆರಂಭವಾದ ಹಮಾಸ್ ದಾಳಿಯಲ್ಲಿ ಒತ್ತೆಯಾಳಾಗಿರುವವರನ್ನು ಮರಳಿ ತರಲು ಇದು ಸರಿಯಾದ ಸಮಯ ಎಂದಿದ್ದಾರೆ.

2023ರ ಅಕ್ಟೋಬರ್ 7ರಂದು ಹಮಾಸ್ ನಡೆಸಿದ್ದ ದಾಳಿಯು ಇಸ್ರೇಲ್ ಇತಿಹಾಸದಲ್ಲೇ ಭೀಕರ ದಾಳಿಯಾಗಿದ್ದು, ಇದರಲ್ಲಿ 1,210 ಮಂದಿ ಸಾವನ್ನಪ್ಪಿದ್ದರು ಎಂದು ಎಎಫ್?ಪಿ ತಿಳಿಸಿದೆ. ಈ ದಾಳಿಗೆ ಪ್ರತಿಯಾಗಿ ದಾಳಿ ನಿರ್ಧಾರ ಮಾಡಿದ ಇಸ್ರೇಕ್,? ಗಾಜಾವನ್ನು ಬಹುಪಾಲು ನಾಶ



ಮಾಡಿ, 46,707 ಮಂದಿ ಹತ್ಯೆ ನಡೆಸಿತು ಎಂದು ಹಮಾಸ್? ಅಧಿಕಾರ ಹೊಂದಿರುವ ಪ್ರದೇಶದ ಆರೋಗ್ಯ ಸಚಿವರು ತಿಳಿಸಿದ್ದರು.

ಈ ಒಪ್ಪಂದ ಘೋಷಣೆಯಾದ ಬಳಿಕ ಇಸ್ರೇಲ್?ನಲ್ಲಿ ಕನಿಷ್ಠ 20 ಮಂದಿ ಸಾವನ್ನಪ್ಪಿದ್ದಾರೆ ಎಂದು ಗಾಜಾ ನಾಗರಿಕ ರಕ್ಷಣಾ ಪಡೆ ತಿಳಿಸಿದೆ.

ಈ ಒಪ್ಪಂದ ಕುರಿತು ಬುಧವಾರ ಮಾತನಾಡಿರುವ ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ರಹ್ಮಾನ್ ಬಿನ್ ಜಾಸಿಮ್ ಅಲ್–ಥಾನಿ, ಈ ಒಪ್ಪಂದಕ್ಕಾಗಿ ಎರಡು ನಿಯೋಗಗಳು ಗಾಜಾ ಪಟ್ಟಿ ಸೇರಿವೆ. ಕದನ ವಿರಾಮವೂ ಭಾನುವಾರದಿಂದ ಜಾರಿಯಾಗಲಿದೆ. ಇದು ಯುದ್ಧದ ಕೊನೆಯ ಪುಟ ಎಂಬ ಭರವಸೆಯನ್ನು ನಾವು ಹೊಂದಿದ್ದೇವೆ. ಈ ಒಪ್ಪಂದದ ಎಲ್ಲಾ ಷರ್ತುಗಳ ಜಾರಿಗೆ ಎಲ್ಲರೂ ಬದ್ಧವಾಗಿದ್ದಾರೆ ಎಂಬ ಭರವಸೆಯನ್ನು ನಾವು ಹೊಂದಿದ್ದೇವೆ ಎಂದಿದ್ದಾರೆ.

ಈ ನಡುವೆ ಮಾತನಾಡಿರುವ ಬಿಡೆನ್, ಈ ದಿನ ಬಂದಿರುವುದಕ್ಕೆ ಅಗಾಧ ತೃಪ್ತಿ ಇದೆ. ಈ ಮಾತುಕತೆಯು ತನ್ನ ವೃತ್ತಿಯಲ್ಲಿನ ಕೆಲವು ಕಠಿಣಗಳಲ್ಲಿ ಒಂದಾಗಿದೆ. ಎರಡನೇ ಹಂತದ ಒಪ್ಪಂದವೂ ಯುದ್ಧವನ್ನು ಶಾಶ್ವತ ಅಂತ್ಯಕ್ಕೆ ತರುತ್ತದೆ ಎಂಬ ಕುರಿತು ಇನ್ನೂ ನಿರ್ಧಾರವಾಗಬೇಕಿದೆ. ಈ ಒಪ್ಪಂದ ಸಾಗುತ್ತದೆ ಎಂಬ ವಿಶ್ವಾಸವೂ ಇದೆ ಎಂದಿದ್ದಾರೆ. ಕದನವಿರಾಮವೂ ಪ್ಯಾಲೇಸ್ತೇನಿಯರ ದೃಢತೆ ಮತ್ತು ಗಾಜಾ ಪಟ್ಟಿಯಲ್ಲಿ ನಮ್ಮ ಧೈರ್ಯದ ಪ್ರತಿರೋಧದ ಫಲಿತಾಂಶವಾಗಿದೆ ಎಂದು ಹಮಾಸ್ ತಿಳಿಸಿದೆ.

**ಒಪ್ಪಂದದ ಮೊದಲ 42 ದಿನ:** ಕತಾರ್, ಈಜಿಪ್ಟ್ ಮತ್ತು ಅಮೆರಿಕ ಮಧ್ಯವರ್ತಿಗಳು ಈ ಒಪ್ಪಂದ ಪ್ರಯತ್ನಗಳನ್ನು ತೀವ್ರಗೊಳಿಸಿದ್ದರಿಂದ, ಈ ಯುದ್ಧವೂ ಅಂತ್ಯದ ಅಂಚಿನಲ್ಲಿದೆ. ಕತಾರ್ ಶೇಖ್ ಮೊಹಮ್ಮದ್ ಮಾತನಾಡಿ, ಮೂರು ದೇಶಗಳು ಕೈರೋ ಮೂಲದ ಸಂಸ್ಥೆಯ ಮೂಲಕ ಕದನ ವಿರಾಮ ಜಾರಿಗೆ ತರಲು ಮೇಲ್ವಿಚಾರಣೆ ನಡೆಸಲಿವೆ. ಕದನ ವಿರಾಮದ ಮೊದಲ 42 ದಿನದಲ್ಲಿ 33 ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗುವುದು. ಹಾಗೇ ಮೊದಲ ಹಂತದಲ್ಲಿ ಗಾಜಾದಲ್ಲಿರುವ ಇಸ್ರೇಲ್ ಪಡೆಗಳನ್ನು ಹಿಂಪಡೆಯಲಿದೆ. ಎರಡನೇ ಹಂತದಲ್ಲಿ ಒತ್ತೆಯಾಳುಗಳ ವಿನಿಮಯವಾಗಿ ಪ್ಯಾಲೆಸ್ತೇನಿಯ ಜೈಲಿಯಲ್ಲಿರುವವರನ್ನು ಬಿಡುಗಡೆ ಮಾಡಲಾಗುವುದು. ಮೂರನೇ ಹಂತವು 42 ದಿನಗಳ ಬಳಿಕ ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು. ಒತ್ತೆಯಾಳುಗಳನ್ನು ಬಿಡುಗಡೆ ಮಾಡುವಂತೆ ಆಗ್ರಹಿಸುತ್ತಿದ್ದ ಪ್ರತಿಭಟನಾಕಾರರು ಈ ಒಪ್ಪಂದ ಸುದ್ದಿ ತಿಳಿಯುತ್ತಿದ್ದಂತೆ ಗಾಜಾದಲ್ಲಿ ಸಾವಿರಾರು ಮಂದಿ ಸಂಭ್ರಮಾಚಾರಣೆ ಮಾಡಿದರು. ಈ ಕುರಿತು ಸಂತಸ ವ್ಯಕ್ತಪಡಿಸಿ ಮಾತನಾಡಿರುವ ಗಾಜಾದ 45 ವರ್ಷದ ವ್ಯಕ್ತಿ, ಕಳೆದೊಂದು ವರ್ಷದ ಕೆಟ್ಟ ಕನಸೊಂದು ಕಡೆಗೂ ಅಂತ್ಯಗೊಳ್ಳುತ್ತಿದೆ. ನಾವು ಸಾಕಷ್ಟು ಜನರನ್ನು ಮತ್ತು ಎಲ್ಲವನ್ನೂ ಕಳೆದುಕೊಂಡಿದ್ದೇವೆ ಎಂದು ಭಾವುಕರಾದರು.

# 'ಭಾರತದ ರಾಜ್ಯ'ದ ವಿರುದ್ಧ ಹೋರಾಡುತ್ತಿದ್ದೇವೆ

**ನವದೆಹಲಿ:** ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತೊಂದು ವಿವಾದಿತ ಹೇಳಿಕೆ ನೀಡಿದ್ದಾರೆ. ನಾವು ಬಿಜೆಪಿ, ಆರ್‌ಎಸ್‌ಎಸ್ ಜೊತೆಗೆ ಭಾರತದ ರಾಜ್ಯದ ವಿರುದ್ಧ ಹೋರಾಟ ನಡೆಸಬೇಕಿದೆ ಎಂದು ಹೇಳಿದ್ದಾರೆ. ಇದು ಕಾಂಗ್ರೆಸ್‌ನ ಕರಾಳ ಮುಖ ಎಂದು ಬಿಜೆಪಿ ಟೀಕಿಸಿದೆ.

ದೆಹಲಿಯಲ್ಲಿ ಬುಧವಾರ ನಡೆದ ಕಾಂಗ್ರೆಸ್ ಕೇಂದ್ರ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ರಾಹುಲ್ ಗಾಂಧಿ ಮಾತನಾಡುತ್ತಾ, ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡರು. ವಿಪಕ್ಷಗಳು ಇಂದು ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಮಾತ್ರವಲ್ಲ, 'ಭಾರತದ ವಿರುದ್ಧ'ವೂ ಹೋರಾಡುತ್ತಿವೆ ಎಂದರು. ಪಕ್ಷ ಮತ್ತು ಸಂಘಟನೆಗಳ ಮಧ್ಯೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಇರಬಹುದು. ಆದರೆ, ದೇಶ ಎಲ್ಲರಿಗೂ ಒಂದೇ. ಅಂತಹ ದೇಶದ ವಿರುದ್ಧವೇ ರಾಹುಲ್ ಗಾಂಧಿ ಹೋರಾಡಲು ಕರೆ ನೀಡಿದ್ದಾರೆ. ಇದು ರಾ?ಷ್ಟ್ರಕ್ಕೆ ಮಾಡಿದ ಅವಮಾನ ಎಂದು ಬಿಜೆಪಿ ಆರೋಪಿಸಿದೆ. ಅಪಕ್ವ ವಿಪಕ್ಷ ನಾಯಕ: ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಗೌರವ್ ಭಾಟಿಯಾ, "ಭಾರತವು ಒಬ್ಬ ಜವಾಬ್ದಾರಿಯುತ ಮತ್ತು ನಿ?ಷ್ಠಾವಂತ ವಿಪಕ್ಷ ನಾಯಕನ ಹೊಂದಲು ಅರ್ಹವಾಗಿದೆ" ಎಂದು ಹೇಳುವ ಮೂಲಕ ರಾಹುಲ್ ಗಾಂಧಿ ವಿರುದ್ಧ ಕಿಡಿಕಾರಿದರು.

ಬಿಜೆಪಿ, ಆರ್‌ಎಸ್‌ಎಸ್ ದೇಶ ಕಟ್ಟಲು ಪ್ರಯತ್ನಿಸುತ್ತಿದ್ದರೆ, ಇತ್ತ ರಾಹುಲ್ ಗಾಂಧಿ ದೇಶದ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ. ರಾಹುಲ್ ಅರೆಕಾಲಿಕ ಮತ್ತು ಅಪಕ್ವ ವಿಪಕ್ಷ ನಾಯಕರಾಗಿದ್ದಾರೆ. ಇದು ದೇಶದ ದೌರ್ಭಾಗ್ಯವಾಗಿದೆ. ವಿದೇಶಿ ವ್ಯಕ್ತಿಗಳೊಂದಿಗೆ ಸೇರಿ ದೇಶದ ಸಮಗ್ರತೆ, ಸಾರ್ವಭೌಮತೆಗೆ ಧಕ್ಕೆ ತರುತ್ತಿದ್ದಾರೆ ಎಂದು ಆರೋಪಿಸಿದರು. ರಾಹುಲ್ ಗಾಂಧಿ ಹೇಳಿಕೆಗಳು ರಾ?ಷ್ಟ್ರದ ಸಾರ್ವಭೌಮತೆಗೆ ಚ್ಯುತಿ ತರುತ್ತಿರುವುದು ಇದೇ ಮೊದಲಲ್ಲ. ದೇಶ ವಿರೋಧಿ ವ್ಯಕ್ತಿಗಳಿಂದ ಹಣಕಾಸಿನ ನೆರವು ಪಡೆದು ಈ ರೀತಿಯ ಹೇಳಿಕೆಗಳನ್ನು ನೀಡುತ್ತಾರೆ. ರಾಹುಲ್ ವಿಪಕ್ಷ ನಾಯಕನಾಗಿ ಮುಂದುವರಿಯುವುದು ದೇಶದ ಪ್ರತಿಯೊಬ್ಬ ನಾಗರಿಕನಿಗೆ ಮಾಡಿದ ಅವಮಾನ ಎಂದು ಜರಿದರು.



ತಮಿಳುನಾಡಿನ ಎಂ ಕರುಣಾನಿಧಿ ಅವರ ಅಕ್ಕನ ಮಗ ಅಮೃತಂ ಜತೆ ನಟಿ ಮಂಜುಳಾ ಮದುವೆ ಮಾಡಿಕೊಳ್ಳುತ್ತೇನೆ ಎಂದಾಗಲೂ ಹಲವು ಹಿರಿಯರು 'ಬೇಡ' ಎಂದಿದ್ದರಂತೆ. ಆದರೆ, 'ನಾನು ನನ್ನ ಹೃದಯ ಕೊಟ್ಟುಬಿಟ್ಟಿದ್ದೇನೆ' ಎಂದು ಹೇಳಿ ಮದುವೆ ಮಾಡಿಕೊಂಡಿದ್ದರಂತೆ. ಮಂಜುಳಾ ಸ್ಟಾರ್‌ಗಿರಿ ಕಡಿಮೆ ಆಗುತ್ತಿದ್ದಂತೆ ಆತ ಅವರಿಂದ ದೂರಾವಾದರು. ಬಳಿಕ, ಚಾಮರಾಜನಗರದ ಹುಡುಗ ಲವ್ ಮಾಡಿದ್ದು ಹೌದು

# ಸ್ವಯಂಕೃತ ಅಪರಾಧ

ಖ್ಯಾತ ನಟಿ ಮಂಜುಳಾ ಅವರು 1970 ಹಾಗೂ 1980ರ ದಶಕದಲ್ಲಿ ನಟಿಸಿದ್ದ ಖ್ಯಾತ ನಟಿ. ಕನ್ನಡ ಸಿನಿಮಾಗಳಲ್ಲೇ ಹೆಚ್ಚು ನಟಿಸಿದ್ದ ನಟಿ ಮಂಜುಳಾ ಅವರು ತಮಿಳು ಹಾಗೂ ತೆಲುಗು ಸಿನಿಮಾಗಳಲ್ಲಿ ಕೂಡ ಕಾಣಿಸಿಕೊಂಡಿದ್ದರು.

ನಟಿ ಕಲ್ಪನಾ ಅವರು ಉತ್ತುಂಗದಲ್ಲಿದ್ದಾಗ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಮಂಜುಳಾ, ಮಿನುಗುತಾರೆ ಕಲ್ಪನಾರ ಸ್ಟಾರ್‌ಡಮ್‌ಗೆ ಪೆಟ್ಟು ಕೊಟ್ಟ ನಟಿ ಎನ್ನಬಹುದು. ನಿಧಾನವಾಗಿ ನಟಿ ಕಲ್ಪನಾ ಕೈಯನ್ನು ಬರಿದು ಮಾಡುತ್ತ ಸ್ಟಾರ್ ನಟಿಯಾಗಿ ಬೆಳೆದ ಮಂಜುಳಾ ಅವರು ದುರಂತ ಸಾವು ಕಂಡಿದ್ದು ಸ್ವಯಂಕೃತ ಅಪರಾಧ ಎನ್ನಲಾಗಿದೆ.

08 ನವೆಂಬರ್ 1954ರಂದು ತುಮಕೂರಿನಲ್ಲಿ ಜನಿಸಿದ್ದ ಮಂಜುಳಾ ಅವರು 1965ರಲ್ಲಿ ಪ್ರಭಾತ್ ಕಲಾವಿದರು ಎಂಬ ನಾಟಕ ಕಂಪನಿಯಲ್ಲಿ ನಟನೆ ಶುರು ಮಾಡಿದ್ದರು. 1966ರಲ್ಲಿ ಮನೆ ಕಟ್ಟಿ ನೋಡು ಚಿತ್ರದಲ್ಲಿ ಸಣ್ಣ ಪಾತ್ರ ಮಾಡುವ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟರು ಮಂಜುಳಾ. ಬಳಿಕ 1972ರಲ್ಲಿ 'ಯಾರ ಸಾಕ್ಷಿ' ಚಿತ್ರದ ಮೂಲಕ ನಾಯಕಿ ನಟಿಯಾಗಿ ವೃತ್ತಿಜೀವನ ಆರಂಭಿಸಿದ ಮಂಜುಳಾ ಅವರು ಸಾಯುವವರೆಗೂ ನಟಿಸುತ್ತಲೇ ಇದ್ದರು.

ಸಂಪತ್ತಿಗೆ ಸವಾಲ್ ಚಿತ್ರದಲ್ಲಿ ಡಾ ರಾಜ್‌ಕುಮಾರ್ ಜೋಡಿಯಾದಿ ಬಜಾರಿ ಪಾತ್ರ ಮಾಡಿದ್ದರು ನಟಿ ಮಂಜುಳಾ. ಅವರು ಆ ಪಾತ್ರದಲ್ಲಿ ಅದೆಷ್ಟು ಖ್ಯಾತಿ ಪಡೆದಿದ್ದರು ಎಂದರೆ ಯಾರಾದರೂ ಸ್ವಲ್ಪ ಗಂಡುಬೀರಿ ತರ ಅಡಿದರೆ ಸಾಕು, ಅವರಿಗೆ ಮಂಜುಳಾ ಎಂದೇ ಆಗಿನ ಕಾಲದಲ್ಲಿ ಕರೆಯುತ್ತಿದ್ದರು. 'ನನ್ನ ನೀನು ಗೆಲ್ಲಲಾರೆ..' ಎಂಬ ಹಾಡಂತೂ ಇಂದಿಗೂ ಎಲ್ಲರೂ ನೆನಪಿಸಿಕೊಳ್ಳುತ್ತಾರೆ.

1972–1986ರ ಅವಧಿಯಲ್ಲಿ ಅವರು 100ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು.

ಕನ್ನಡದಲ್ಲಿ ಮಾತ್ರವಲ್ಲದೇ 4 ತಮಿಳು ಹಾಗೂ ಎರಡು ತೆಲುಗು ಸಿನಿಮಾಗಳಲ್ಲಿ ಕೂಡ ನಟಿಸಿದ್ದಾರೆ ಮಂಜುಳಾ. ಆದರೆ, ದುರಾದೃಷ್ಟ ಎಂಬಂತೆ ನಟಿ ಮಂಜುಳಾ ಅವರು ಲವ್‌ನಲ್ಲಿ ಬಿದ್ದರು, ಸ್ಟಾರ್ ನಟಿಯಾಗಿ ಮೆರೆಯುತ್ತಿದ್ದ ಮಂಜುಳಾ ಅವರನ್ನು ಅಂದಿನ ತಮಿಳುನಾಡು ಮುಖ್ಯಮಂತ್ರಿ ಎಂ ಕರುಣಾನಿಧಿ ಅವರ ಅಕ್ಕನ ಮಗ ಅಮೃತಂ ಎರಡನೇ ಮದುವೆ ಆಗಿದ್ದರು. ಆದರೆ ಆ ಮದುವೆ ಬಹಳ ಕಾಲ ಬಾಳಲಿಲ್ಲ. ಆ ಬಳಿಕ ಅವರು ಚಾಮರಾಜನಗರದ ಹುಡುಗನೊಬ್ಬನ ಪ್ರೀತಿಯಲ್ಲಿ ಬಿದ್ದಿದ್ದರು.

ಚಾಮರಾಜನಗರದ ಹುಡುಗ ಹಾಗು ನಟಿ ಮಂಜುಳಾ ಅವರು ಮದುವೆ ಆಗಲೆಂದು ತಿರುಪತಿಗೆ ಹೊರಟಿದ್ದರು. ಆದರೆ, ರಸ್ತೆ ಮಧ್ಯೆ ಆ ಹುಡುಗ 'ನಂಗೆ ಯಾಕೋ ಹೀಗೆ ನಾವು ಕದ್ದು ಮದುವೆ ಆಗುತ್ತಿರುವುದು ಸರಿ ಎನಿಸುತ್ತಿಲ್ಲ. ನಾವು ನಮ್ಮ ಅಪ್ಪ–ಅಮ್ಮನ ಆಶೀರ್ವಾದ ಪಡೆದು ಮತ್ತೆ ಬರುವಾ' ಎಂದು ಹೇಳಿ ವಾಪಸ್ ಹೊರಟ. ಅವನ ಜೊತೆ ವಾಪಸ್ ಹೋದರು ನಟಿ ಮಂಜುಳಾ. ಆದರೆ ಇಬ್ಬರೂ ಸೇರಿ ಮುಂಜುಳಾ ಮನೆಗೆ ಹೋಗಿ ಮದುವೆಯ ಚರ್ಚೆಯಲ್ಲಿ ತೊಡಗಿಕೊಂಡರು. ಪರಸ್ಪರ ವಾಗ್ವಾದ ಕೂಡ ನಡೆಯಿತು.

ನಟಿ ಮಂಜುಳಾಗೆ ಆತ ತನ್ನನ್ನು ಮದುವೆಯಾಗುವುದು ಸುಳ್ಳು ಎನ್ನಿಸಿತ್ತು. ಅವರು ಪದೇಪದೇ ಅದನ್ನೇ ಕೇಳುತ್ತ 'ನೀವು ನಿಜವಾಗಿಯೂ ನನ್ನ ಮದುವೆ ಆಗ್ತೀಯಾ? ನಿನ್ನ ಅಪ್ಪ–ಅಮ್ಮ ಒಪ್ಕೋತಾರಾ? ನೀನು ಮದುವೆ ಆಗಿಲ್ಲ ಅಂದ್ರೆ ನಾನು ಪ್ರಾಣ ಕಳ್ಕೋತೀನಿ' ಎನ್ನುತ್ತಾ ಆತನನ್ನು ಹೆದರಿಸಲು (ಬ್ಲಾಕ್‌ಮೇಲ್?) ಮಾಡಲು ಸೀಮೆಎಣ್ಣೆ ಸುರಿದುಕೊಂಡರು. ಅಲ್ಲೇ ಇದ್ದ ಬೆಂಕಿಪೊಟ್ಟಣದಿಂದ ಒಂದು ಕಡ್ಡಿ ಗೀರಿಕೊಂಡರು ಅಷ್ಟೇ. ನಟಿ ಮಂಜುಳಾ ಮೈಗೆ ಬೆಂಕಿ ಹೊತ್ತಿಕೊಂಡಿತು. ಆರಿಸಲು ಪ್ರಯತ್ನಪಟ್ಟರೂ ಆ ಹುಡುಗನಿಗೆ ಸಾಧ್ಯವಾಗಲಿಲ್ಲ. ಬಹಳಷ್ಟು ಸುಟ್ಟುಹೋಗಿದ್ದ ಮಂಜುಳಾರನ್ನು ಆಸ್ಪತ್ರೆಗೆ ಸೇರಿಸಿದರೂ ಬದುಕಿ ಉಳಿಯಲಿಲ್ಲ.

ತಮಿಳುನಾಡಿನ ಎಂ ಕರುಣಾನಿಧಿ ಅವರ ಅಕ್ಕನ ಮಗ ಅಮೃತಂ ಜತೆ ನಟಿ ಮಂಜುಳಾ ಮದುವೆ ಮಾಡಿಕೊಳ್ಳುತ್ತೇನೆ ಎಂದಾಗಲೂ ಹಲವು ಹಿರಿಯರು 'ಬೇಡ' ಎಂದಿದ್ದರಂತೆ. ಆದರೆ, 'ನಾನು ನನ್ನ ಹೃದಯ ಕೊಟ್ಟುಬಿಟ್ಟಿದ್ದೇನೆ' ಎಂದು ಹೇಳಿ ಮದುವೆ ಮಾಡಿಕೊಂಡಿದ್ದರಂತೆ. ಮಂಜುಳಾ ಸ್ಟಾರ್‌ಗಿರಿ ಕಡಿಮೆ ಆಗುತ್ತಿದ್ದಂತೆ ಆತ ಅವರಿಂದ ದೂರಾವಾದರು.

ಬಳಿಕ, ಚಾಮರಾಜನಗರದ ಹುಡುಗ ಲವ್ ಮಾಡಿದ್ದು ಹೌದು, ಆದರೆ, ಮದುವೆ ಅಂತ ಬಂದಾಗ ಮನೆಯವರ ಆಶೀರ್ವಾದ ಬೇಕು ಅಂದ. ಆದರೆ, ಅದೇನೋ ಸಂಶಯ ಹೊಂದಿದ್ದ ಮಂಜುಳಾ ತಾವೇ ತಮ್ಮ ಜೀವಕ್ಕೆ ಅಂತ್ಯ ಕೊಟ್ಟುಕೊಂಡುಬಿಟ್ಟರು. ಅದು ಉದ್ದೇಶಪೂರ್ವಕ ಆತ್ಮಹತ್ಯೆ ಆಗಿರಲಿಲ್ಲ, ಆದರೆ, ಸ್ವಯಂಕೃತ ಅಪರಾಧ ಆಗಿತ್ತು ಎನ್ನಹುದೇ? ಒಟ್ಟಿನಲ್ಲಿ, ನಟಿ ಮಂಜುಳಾ ಅವರದು ದುರಂತ ಸಾವಂತೂ ಹೌದು.



# 'ಎಕ್ಕ' ಅಡ್ಡ ಸೇರಿದ ಸಂಜನಾ

ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಚಿತ್ರಕ್ಕೆ ಸಂಜನಾ ಆನಂದ್ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ರೋಹಿತ್ ಪದಕಿ ನಿರ್ದೇಶನದ ಈ ಚಿತ್ರಕ್ಕೆ ಇಬ್ಬರು ನಾಯಕಿಯರು ಇರಲಿದ್ದಾರೆ.

ಮೊದಲ ನಾಯಕಿಯಾಗಿ ಸಂಪದಾ ಆಯ್ಕೆ ಆಗಿದ್ದರು. ಈಗ ಸಂಜನಾ ಆನಂದ್ ಚಿತ್ರತಂಡಕ್ಕೆ ಜತೆಯಾಗಿದ್ದಾರೆ. ಬೆಂಗಳೂರಿನ ಭೂಗತ ಜಗತ್ತಿನಲ್ಲಿರುವ ವ್ಯಕ್ತಿಯೊಬ್ಬನ ಪ್ರಯಾಣದ ಕತೆಯನ್ನು ಒಳಗೊಂಡ ಈ ಚಿತ್ರದಲ್ಲಿ ಅತುಲ್ ಕುಲಕರ್ಣಿ, ಶ್ರುತಿ, ರಾಹುಲ್ ದೇವ್‌ಶೆಟ್ಟಿ ನಟಿಸುತ್ತಿದ್ದಾರೆ.

ಜಾಕಿ ಚಿತ್ರಕ್ಕೆ ಮೊದಲು ಇಟ್ಟಿದ್ದ ಹೆಸರೇ ಎಕ್ಕ: ಹೈ ಡ್ರಾಮಾ ಇರುವ ಅಕ್ಷನ್ ಸಿನಿಮಾ. ಸಖತ್ ರಿಯಾಲಿಸ್ಟಿಕ್ ಕತೆ ಇದೆ. ಪ್ರತಿಯೊಬ್ಬನ ಜೀವನಕ್ಕೂ ಕನೆಕ್ಟ್ ಆಗುವ ಕತೆ ಇಲ್ಲಿದೆ. ವೈಯಕ್ತಿಕವಾಗಿಯೂ ಕಾಡುತ್ತದೆ.

ನನ್ನ ಕ್ಯಾರೆಕ್ಟರ್ ಹೆಸರು ಎಕ್ಕ. ಬೇರೆ ಹೆಸರೂ ಇರುತ್ತದೆ. ಆ ಹೆಸರು ಯಾವುದು, ಎಕ್ಕ ಅಂತ ಯಾಕೆ ಕರೆಯುತ್ತಾರೆ ಎಂಬುದು ಕೂಡ ಚಿತ್ರದ ಕತೆಯ ಭಾಗ. ಏರಿಳಿತಗಳು ಇರುವ ಎಮೋಷನ್ ಪಾತ್ರ ಮಾಡುತ್ತಿದ್ದೇನೆ.

ಚಿಕ್ಕಪ್ಪ ಮಾಡಿದ 'ಜಾಕಿ' ಸಿನಿಮಾ ನೆನಪಾಯಿತು. ಯಾಕೆಂದರೆ ಆ ಚಿತ್ರದಲ್ಲಿ ಬರುವ ಹಾಡಿನಲ್ಲಿ ಎಕ್ಕ ಎಂಬುದು ಸಿಕ್ಕಾಪಟ್ಟೆ ಜನಪ್ರಿಯವಾಗಿದೆ. ಹಾಗೆ ನೋಡಿದರೆ 'ಜಾಕಿ' ಚಿತ್ರಕ್ಕೆ ಮೊದಲ ಇದ್ದ ಹೆಸರು 'ಎಕ್ಕ' ಅಂತಲೇ.

ಆದರೆ, ಚಿಕ್ಕಪ್ಪನ ಪಾತ್ರದ ಹೆಸರು ಜಾಕಿ ಇದಿದ್ದರಿಂದ 'ಜಾಕಿ' ಆಯಿತು. ಚಿಕ್ಕಪ್ಪ ಮಾಡಬೇಕಿದ್ದ ಹೆಸರಿನ ಚಿತ್ರದಲ್ಲಿ ನಾನು ನಟಿಸುತ್ತಿದ್ದೇನೆಂಬ ಖುಷಿ ಇದೆ. ಈಗಾಗಲೇ ಎರಡು ಫೋಟೋ ಬಿಡುಗಡೆ ಮಾಡಿದ್ದೇವೆ.

ನೀವು ನೋಡಿದ್ದೀರಿ. ಇಡೀ ಸಿನಿಮಾ ಇದೇ ರೀತಿ ಓಪನ್ ಸ್ಟ್ರೀಟ್‌ನಲ್ಲಿ ನಡೆಯುತ್ತದೆ. ರಿಯಾಲಿಸ್ಟಿಕ್ ಸಿನಿಮಾ. 'ಕಡ್ಡಿಪುಡಿ' ಫ್ಲೇವರ್ ಇರುತ್ತದೆ. ಅಂದರೆ ಆ ರೀತಿಯ ಪಕ್ಕಾ ಲೋಕಲ್ ಕಲ್ಟ್ ಸಿನಿಮಾ ಇದಾಗಿರುತ್ತದೆ ಎಂದರು ಯುವ ರಾಜ್‌ಕುಮಾರ್.

# ನಟ ಮಹೇಶ್ ಬಾಬುಗೆ ಚಿತ್ರಹಿಂಸೆ



ಸೂಪರ್ ಸ್ಟಾರ್ ಅಭಿಮಾನಿಗಳು ಬಹುಕಾಲದಿಂದ ಕಾಯುತ್ತಿದ್ದ ರಾಜಮೌಳಿ ಸಿನಿಮಾ ಖಖಒಃ 29 ಓಪನಿಂಗ್ ಆಗಿದೆ. ಚಿತ್ರೀಕರಣ ಯಾವಾಗ ಶುರುವಾಗುತ್ತದೆ ಎಂದು ಎಲ್ಲರೂ ಯೋಚಿಸುತ್ತಿರುವಾಗ ಈ ಸಿನಿಮಾಕ್ಕೆ ಸಂಬಂಧಿಸಿದ ಒಂದು ದೊಡ್ಡ ಅಪ್ಡೇಟ್ ಹೊರಬಿದ್ದಿದೆ. ಏನೆಂದರೆ..? ಶೀಘ್ರದಲ್ಲೇ ಈ ಸಿನಿಮಾ ಚಿತ್ರೀಕರಣ ಶುರುವಾಗಲಿದೆ. ಈ ಕೆಲಸಗಳು ಒಂದು ಕಡೆ ನಡೆಯುತ್ತಿರುವಾಗ ಮಹೇಶ್ ಬಾಬುರನ್ನು ಆಫ್ರಿಕಾದ ಭಯಾನಕ ಕಾಡಿಗೆ ಜಕ್ಕಣ್ಣ ಕರೆದೊಯ್ಯಲಿದ್ದಾರೆ.

ಚಿತ್ರೀಕರಣ ಭಾರತದಲ್ಲಿ ಅಲ್ಲ, ವಿದೇಶದಲ್ಲಿ ಶುರುವಾಗಲಿದೆ. ವಿದೇಶದಲ್ಲಿ ಎಂದರೆ ಅಮೆರಿಕ ಅಥವಾ ಆಸ್ಟ್ರೇಲಿಯಾ ಅಲ್ಲ, ಆಫ್ರಿಕಾದ ಕಾಡಿನಲ್ಲಿ ಚಿತ್ರೀಕರಣ ಶುರುವಾಗಲಿದೆ. ಚಿತ್ರೀಕರಣಕ್ಕೆ ತಯಾರಿ ನಡೆಸುವಾಗ ಮಹೇಶ್ ಬಾಬು ಆಫ್ರಿಕಾದ ಕೆಲವು ಬುಡಕಟ್ಟು ಜನಾಂಗಗಳ ಜೊತೆ ಒಂದು ತಿಂಗಳು ಕಳೆಯಲಿದ್ದಾರೆ.


ಅಲ್ಲಿನ ಪದ್ಧತಿ, ವಾತಾವರಣ, ಆಚರಣೆಗಳನ್ನು ಕಲಿಯಲು ಜಕ್ಕಣ್ಣ ಶಿಬಿರವನ್ನು ಆಯೋಜಿಸಲಿದ್ದಾರೆ. ಇದು ಪ್ಯಾನ್ ವರ್ಲ್ಡ್ ಸಿನಿಮಾ ಮತ್ತು ಆಕ್ಷನ್ ಅಡ್ವೆಂಚರ್ ಆಗಿರುವುದರಿಂದ ಮಹೇಶ್ ಈಗಾಗಲೇ ಜಪಾನ್ನಲ್ಲಿ ಸಮರ ಕಲೆಗಳನ್ನು ಅಭ್ಯಾಸ ಮಾಡಿದ್ದಾರೆ. ಇನ್ನಷ್ಟು ಪರಿಣತಿ ಪಡೆಯಲು ಚೀನಾಕ್ಕೂ ಹೋಗಲಿದ್ದಾರೆ.

**ಕಾಡಿನಲ್ಲಿ ಟ್ರೈಬಲ್ಸ್ ಜತೆ ಬಿಟ್ಟ ರಾಜಮೌಳಿ!**

ಅಲ್ಲಿ ಸ್ವಲ್ಪ ಕಾಲ ಇದ್ದು ಸಮರ ಕಲೆಗಳಲ್ಲಿ ಪರಿಣತಿ ಪಡೆಯಲಿದ್ದಾರೆ. ಈಗಾಗಲೇ ಈ ಸಿನಿಮಾ ಓಪನಿಂಗ್ ಆಗಿದೆ. ಆದರೆ ಓಪನಿಂಗ್ ನ ಫೋಟೋ ಅಥವಾ ವಿಡಿಯೋಗಳು ಹೊರಬಂದಿಲ್ಲ. ಯಾವುದೇ ಸಿನಿಮಾ ಆದರೂ ಅದಕ್ಕೆ ಸಂಬಂಧಿಸಿದ ವಿವರಗಳನ್ನು ಮೊದಲೇ ಬಹಿರಂಗಪಡಿಸುವ ರಾಜಮೌಳಿ ಈ ಸಿನಿಮಾ ವಿಷಯದಲ್ಲಿ ಗುಟ್ಟು ಕಾಯ್ದುಕೊಳ್ಳುತ್ತಿದ್ದಾರೆ.

ಮಹೇಶ್ ಲುಕ್ ಜೊತೆಗೆ ದೃಶ್ಯಗಳು ಸೋರಿಕೆಯಾಗದಂತೆ ಜಕ್ಕಣ್ಣ ಎಚ್ಚರಿಕೆ ವಹಿಸುತ್ತಿದ್ದಾರೆ. ಈ ಸಿನಿಮಾ ಬಗ್ಗೆ ನಾನಾ ಸುದ್ದಿಗಳು ಹರಿದಾಡುತ್ತಿವೆ. ಈ ಚಿತ್ರದಲ್ಲಿ ಮಹೇಶ್ ಅಣ್ಣನಾಗಿ ವೆಂಕಟೇಶ್, ಪ್ರಿಯಾಂಕಾ ಚೋಪ್ರಾ ಅಥವಾ ದೀಪಿಕಾ ಪಡುಕೋಣೆ ನಾಯಕಿ, ಪೃಥ್ವಿರಾಜ್ ಸುಕುಮಾರನ್ ಖಳನಾಯಕ ಎಂಬೆಲ್ಲಾ ಸುದ್ದಿಗಳಿವೆ. ಇದರಲ್ಲಿ ಎಷ್ಟು ನಿಜ ಎಂದು ಕಾದು ನೋಡಬೇಕು.

# ಸೈಫ್ ಮೇಲೆ ಚಾಕು ದಾಳಿ, ಆಸ್ಪತ್ರೆಗೆ ದಾಖಲು



**ಮುಂಬೈ:** ಬಾಲಿವುಡ್ ನಟ ಸೈಫ್ ಅಲಿ ಖಾನ್ ಮೇಲೆ ಚಾಕುವಿನಿಂದ ದಾಳಿ ನಡೆಸಲಾಗಿದೆ.

ಚಾಕುವಿನಿಂದ ಇರಿಯಲಾಗಿದ್ದು, ಸದ್ಯ ಮುಂಬೈನ ಲೀಲಾವತಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮುಂಬೈನ ಬಾಂದ್ರಾ ನಿವಾಸದಲ್ಲಿ ಈ ದಾಳಿ ನಡೆದಿದ್ದು, ಸೈಫ್ ಅಲಿ ಖಾನ್ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ. ಬೆಳಗಿನ ಜಾವ ಮೂರು ಗಂಟೆಗೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ಲೀಲಾವತಿ ಅಸ್ಪತ್ರೆಯ ನುರಿತ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸುತ್ತಿದೆ. ಬೆಳಗ್ಗೆ 5.30ರಿಂದಲೇ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ ಎಂದು ತಿಳಿದು ಬಂದಿದೆ. ಮೂರು ಕಡೆ ಚಾಕುವಿನಿಂದ ಇರಿಯಲಾಗಿದ್ದು, ಒಟ್ಟು ಆರು ಭಾಗದಲ್ಲಿ ಗಾಯಗಳಾಗಿವೆ. ಕತ್ತು, ಬೆನ್ನು ಮತ್ತು ಹೊಟ್ಟೆಯ ಭಾಗಕ್ಕೆ ಇರಿಯಲಾಗಿದ್ದು, ಖಾನ್ ಕುಟುಂಬಸ್ಥರೆಲ್ಲರೂ ಆಸ್ಪತ್ರೆಯಲ್ಲಿದ್ದಾರೆ. ಆಸ್ಪತ್ರೆಗೆ ಪೊಲೀಸರು ಸಹ ಭೇಟಿ ನೀಡಿದ್ದು, ಕುಟುಂಬಸ್ಥರಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಮನೆ ಕಳ್ಳತನಕ್ಕೆ ಬಂದಿದ್ದ ವ್ಯಕ್ತಿಯಿಂದ ಈ ದಾಳಿ ನಡೆದಿದೆ ಎನ್ನಲಾಗಿದೆ. ಪೊಲೀಸರು ಆರೋಪಿಯ ಬಂಧನಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಗುರುವಾರ ಬೆಳಗಿನ ಜಾವ ಬಾಂದ್ರಾದಲ್ಲಿರುವ ಸೈಫ್ ಅಲಿ ಖಾನ್ ನಿವಾಸಕ್ಕೆ ನುಗ್ಗಿದ ವ್ಯಕ್ತಿ, ಸೈಫ್ ಅಲಿ ಖಾನ್ ಮೇಲೆ ಚಾಕುವಿನಿಂದ ದಾಳಿ ನಡೆಸಿದ್ದಾನೆ. ಸದ್ಯ ಸೈಫ್ ಅಲಿ ಖಾನ್ ಪ್ರಾಣಾಪಾಯದಿಂದ ಪಾರಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

# ನಟಿ ಕಲ್ಪನಾ ಮೇಲಿದ್ದ ಎರಡು ಆರೋಪಗಳಲ್ಲಿ ಒಂದು ಸತ್ಯ

ಕನ್ನಡದ ಮೇರು ನಟಿ, ಮಿನುಗುತಾರೆ ಕಲ್ಪನಾ ಅವರ ಬಗ್ಗೆ ಅದೆಷ್ಟು ಹೇಳಿದರೂ ಕಡಿಮೆಯೇ ಎನ್ನಬಹುದು. ಕಾರಣ, ಅವರ ವೃತ್ತಿಜೀವನದಷ್ಟೇ ಅವರ ವೈಯಕ್ತಿಕ ಜೀವನ ಕೂಡ ಸದ್ದು–ಸುದ್ದಿ ಮಾಡುತ್ತಿತ್ತು. ಅಚ್ಚಕನ್ನಡದ ಮಿನುಗುತಾರೆ ಕಲ್ಪನಾ ಅವರು ನಮ್ಮನ್ನಗಲಿ ಬಹಳ ವರ್ಷಗಳೇ ಆಗಿಹೋಗಿವೆ. ಆದರೆ ಆ ಅದ್ಭುತ ನಟಿಯ ನೆನಪು ಮಾತ್ರ ಕನ್ನಡ ಸಿನಿರಸಿಕರನ್ನು ಇವತ್ತಿಗೂ ಕಾಡುತ್ತಿದೆ, ಕಾರಣ, ಬದುಕಿದ್ದಾಗ ನಮ್ಮನ್ನು ತಮ್ಮ ನಟನೆಯ ಮೂಲಕ ಬಹಳಷ್ಟು ರಂಜಿಸಿದ್ದ ನಟಿ ಕಲ್ಪನಾ, ದುರಂತ ಸಾವು ಕಂಡು ನಮ್ಮಿಂದ ದೂರವಾದರು.

ಕೇವಲ 35 ವರ್ಷ ಬದುಕಿದ್ದ ನಟಿ ಕಲ್ಪನಾ ಸುಮಾರು 15 ವರ್ಷ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದರು. ಆದರೆ ಅಷ್ಟರಲ್ಲಾಗಲೇ ಅವರು 80ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿ 'ಮಿನುಗುತಾರೆ' ಪಟ್ಟವನ್ನು ಪಡೆದುಕೊಂಡಿದ್ದರು. ಅವರ ನಟನೆಯ ಹೆಚ್ಚು ಚಿತ್ರಗಳು ಕನ್ನಡವೇ ಆಗಿತ್ತು. ತಮಿಳು, ತೆಲುಗು ಹಾಗೂ ಮಲಯಾಳಂ ಸಿನಿಮಾಗಳಲ್ಲಿ ಕೂಡ ನಟಿ ಕಲ್ಪನಾ ನಟಿಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲೇ ಹುಟ್ಟಿದ್ದ (1943) ಹುಟ್ಟಿದ್ದ ನಟಿ ಕಲ್ಪನಾ ಅವರು ಕಪ್ಪು–ಬಿಳುಪು ಚಿತ್ರಗಳಲ್ಲಿ ಸಹ ನಟಿಸಿ ಬಹಳಷ್ಟು ಹೆಸರು ಮಾಡಿದ್ದರು.

ಮೇರುನಟರಾದ ಡಾ ರಾಜ್‌ಕುಮಾರ್, ವಿಷ್ಣುವರ್ಧನ್ ಜೋಡಿಯಾಗಿ ಕೂಡ ಕಲ್ಪನಾ ನಟಿಸಿದ್ದರು. ಸಂದರ್ಭ (1978), ಗಂಧದ ಗುಡಿ (1973) ಹಾಗೂ ವಂಶಜ್ಯೋತಿ (1978) ಚಿತ್ರಗಳಲ್ಲಿ ನಟಿ ಕಲ್ಪನಾ ಅವರು ನಟ ವಿಷ್ಣುವರ್ಧನ್ ಜೊತೆ ತೆರೆ ಹಂಚಿಕೊಂಡಿದ್ದರು. ಡಾ ರಾಜ್‌ಕುಮಾರ್ ಜೊತೆಯಲ್ಲಿ ಹಣ್ಣೆಲೆ



ಚಿಗುರಿದಾಗ, ಇಮ್ಮಡಿ ಪುಲಿಕೇಶಿ ಸೇರಿದಂತೆ ಸಾಕಷ್ಟು ಚಿತ್ರಗಳಲ್ಲಿ ನಟಿಸಿದ್ದರು ಕಲ್ಪನಾ.

ಇಂಥ ಮಹಾನ್ ನಟಿ ಕಲ್ಪನಾ ಅವರ ಮೇಲೆ ಒಂದಷ್ಟು ಆರೋಪಗಳು ಇದ್ದವು.

ಹಾಗಿದ್ದರೆ ಆ ಆರೋಪಗಳು ಯಾವವು? ಒಂದು, ಅವರು ಶೂಟಿಂಗ್ ಸೆಟ್‌ಗೆ ಲೇಟಾಗಿ ಬರುತ್ತಿದ್ದರು. ಶೂಟಿಂಗ್ 9 ಗಂಟೆಗೆ ಶುರುವಾದರೆ ಅವರು ಬರುತ್ತಿದ್ದುದು 11 ಗಂಟೆಗೆ. ಇನ್ನೊಂದು ಆರೋಪ, ಅವರಿಗೆ ತುಂಬಾ ಹೆಡ್ ವೇಟ್ ಎಂಬುದಾಗಿತ್ತು. ಆದರೆ, ಬಹುತೇಕರು ಹೇಳುವ ಪ್ರಕಾರ ಅವರು ಲೇಟ್ ಆಗಿ ಸೆಟ್‌ಗೆ ಬರುತ್ತಿದ್ದುದು ಹೌದು. ಆದರೆ ಅವರಿಗೆ ಅಹಂಕಾರ ಅಷ್ಟೇನೂ ಇರಲಿಲ್ಲ. ಕನ್ನಡದ ಹಿರಿಯ ನಟ ರಾಜೇಶ್ ಅವರು ಈ ಬಗ್ಗೆ ಮಾತನ್ನಾಡುತ್ತ 'ನಟಿ ಕಲ್ಪನಾ ಅವರು ಲೇಟ್ ಅಗಿ ಶೂಟಿಂಗ್‌ಗೆ ಬರುತ್ತಿದ್ದರು ಎಂಬ ಅರೋಪದಲ್ಲಿ ಸತ್ಯವಿದೆ. ಆದರೆ ಅವರಿಗೆ ಹೆಡ್‌ವೇಟ್ ಇರಲಿಲ್ಲ' ಎಂದಿದ್ದಾರೆ.

ಈ ಬಗ್ಗೆ ಸಂದರ್ಶನವೊಂದರಲ್ಲಿ ಮಾತನಾಡಿರುವ ಹಿರಿಯ ನಟ ಹಾಗೂ ಆ ಕಾಲದಲ್ಲಿ ನಟಿ ಕಲ್ಪನಾ ಅವರೊಂದಿಗೆ ನಟಿಸಿರುವ ಸಹಕಲಾವಿದರಾದ ರಾಜೇಶ್ ಅವರು ಹೀಗೆ ಹೇಳಿದ್ದಾರೆ.

ಅಂದು ಕಲ್ಪನಾ ಅವರಂತಹ ಅಪ್ಪಟ ಪ್ರತಿಭೆ, ಪ್ರತಿಭಾವಂತೆ ಅಭಿನೇತ್ರಿ ಮತ್ತೊಬ್ಬರಿರಲಿಲ್ಲ.

ಅವರು ನಟಿಸಿದ ಚಿತ್ರಗಳೆಲ್ಲವೂ 25 ವಾರಗಳು, ನೂರು–ಇನ್ನೂರು ದಿನಗಳು ಓಡುತ್ತಿದ್ದವು. ಹೀಗಿರುವಾಗ ಮಾನವ ಸಹಜವಾಗಿಯೇ ಯಾರಿಗಾದರೂ ತಾವು ಯಾರೆಂದು ಅರ್ಥವಾಗುತ್ತದೆ. ಅದು ಕಲ್ಪನಾ ಅವರಿಗೂ ಗೊತ್ತಿತ್ತು. ಆದರೆ ಅವರು ಯಾವತ್ತೂ ಅಹಂಕಾರ ತೋರಿಸಿರಲಿಲ್ಲ' ಎಂದಿದ್ದಾರೆ.



ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
**RNI.KAR/KAN/2009/31934.**VOLUME-16/ISSUE-**51** Email-mussanje2010@gmail.com, Phone: **9448074878**